# LAHARI COMMUNIQUE

*Its Unique!*

Volume : 1 | December-2010 | Part 8 | Price : Rs. 2


## Greetings on the occasion of Advocates' Day

## 'Rotten Allahabad High Court': Supreme Court

In one of severe castigations of the High Court, a bench of the Supreme Court has slammed the Allahabad High Court that `some thing is rotten' in the High Court. Allahabad High Court had to face this ignominy for its order on Wakf land to made available for commercial purpose.

A bench of the Supreme Court consisting of Justices Markandey Katju and Gyan Sudha Mishra observed, "Something is rotten in the State of Denmark, said Shakespeare in Hamlet, and it can similarly be said that something is rotten in the Allahabad High Court which really needs some house cleaning."

The bench was considering the validity of an order of the High Court which had asked a Bahraich-based Waqf Board to provisionally make available a piece of its land to a circus company to conduct its show during an annual fair even when it had no territorial jurisdiction over the region.

The bench made the stinging and insinuating remarks against the 'rotten' elements in the Allahabad High Court and urged the Chief Justice of the High Court to initiate strong measures to cure the `rot' in the system.

Surprisingly, the SC bench recommended transfer of the 'incorrigible judges' of the High Court.

## Disclosure norms: SEBI's power to exempt upheld

The Supreme Court by its order in the last week of November has upheld the power of Securities and Exchange Board of India (SEBI) to exempt companies from disclosure norms.

Those companies that seek to raise funds from general public by making public offer (PO) are bound to make certain disclosures about the company, its directors and its business project under the Disclosure and Investor Protection (DIP) guidelines.

The order of the Supreme Court came on a petition filed by SEBI challenging the order of Securities Appellate Tribunal (SAT) which had directed the Bombay Stock Exchange to grant in-principle approval for the allotment and listing of shares issued by S Kumar's Nationwide Ltd to its promoters on a preferential basis. This order was passed overruling the order of the SEBI declining to grant such exemption. SAT had come to the conclusion that the company could not make disclouse under the DIP guidelines for reasons beyond its control.

A bench consisting of Chief Justice S H Kapadia and his companion judges Justices K S Radhakrishnan and Swatanter Kumar upheld the power of SEBI alone to grant such exemption.

## Green signal for J| Soumitra Sen's impeachment

Stage is all set to impeach J| Soumitra Sen of Kolkata High Court. The committee constituted under the Judges Enquiry Act, 1968 has submitted its report to the Chairman of the Rajya Sabha recommending action against the erring judge.

In the second case of this nature after the Constitution came into force, will the Parliament force the judge out of his office?

Though the three-member committee clearly is of the opinion that Justice Sen was "guilty of 'misbehaviour' under Article 124(4) read with proviso (b) to Article 217(1) of the Constitution of India," political consensus seems to be missing this time too as in the case of impeachment of Justice Ramaswamy of the Supreme Court.

As a lawyer, Sen was appointed receiver of Rs.33,22,800 as sale proceeds of goods in a case instituted by SAIL on Shipping Corporation of India. Allegations are that Sen misappropriated the amount.

After his elevation to the High Court, one of the parties moved the court and a single judge directed Sen to pay Ra.52,46,454, which included principal and interest on the deposit. Sen deposited Rs.40 lakh and sought time, through an application made by his mother, to deposit the remaining amount. Sen ultimately remitted the remaining amount by the end of 2006.

The matter, perhaps, would have rested there. But then Sen, through his mother, moved the court for expunging the adverse remarks made by the Court against him. A single judge declined and Sen moved the division bench. The bench expunged the remarks by saying "there was no evidence of any kind to show that said erstwhile Receiver had done anything benefiting himself…."

But now it has turned out that Sen obtained this order by misleading the division bench.

*Contd...Page 3*

## Central Vigilance Commissioner under SC's scanner

In yet another case Supreme Court has expressed doubt about credibility of the Vigilence Commissioner P.J.Thomas. On 30th Nov. SC expressed reservation on the objectivity of the CVC if he were to supervise the CBI probe into 2G spectrum scam. Thomas, observed the SC, himself is under the scanner of CBI being the Secretary of Telecome Department at the relevant point of time.

Presently, the SC is seized of the question of validity of his appointment to the post to supervise several investigations of the Central Bureau of . Investigation. In a PIL filed by James Lingdo, former Election Commissioner, the SC has summoned the file pertaining to the appointment of CVC. It is a fact that the CVC has been appointed by majority and not by unanimity.

These developments may force the CVC to resign.

> ***"Let us proceed on assumption that at every stage there will be allegations that you should not process a file as Central Vigilance Commissioner as you are accused in a criminal case. How will you function as CVC?,"***
>
> ***SC Bench on the appointment of CVC.***

> ***"Justice Padmaraj had been allotted a site at a layout developed in violation of norms. Can we expect fair inquiry by such a person?"***
>
> ***H.D.Kumar Swamy, Former CM on recently announced judicial commission to enquire into land grab allegations.***

"There is no odor so bad as that which arises from goodness tainted." *-Henry David Thoreu*

**Editor Speaks**

# Treat the 'rot'

## *Don't spread it*

A recent observation of the Supreme Court on the functioning rather mal functioning of the Allahabad High Court including its Lucknow bench may serve as shock to the common man but it does not even surprise those in the legal circle. The occasion for the Supreme Court to make such strongly worded remark was a case emanating from Allahabad HC's principal bench where a single judge had directed the Waqf Board of Bahraich to termporarily allot a piece of its land to the owner of a circus company to exhibit its show in an annual fair.

Court did not stop at merely observing that something is rotten in the system. It went further and said the most obvious thing. The 'uncle judge' syndrome is plaguing the system. An unholy nexus between judges and Advocates has brought about this situation.

When the bench and the bar do not maintain honourable distance the rot sets in. Rot begins to stink. The stink seems to have reached the Supreme Court now.

The Supreme Court has done the right thing by severely critisising the system. But the remedy it has suggested is not acceptable. To "transfer the incorrigible" is not the right medicine to the decease. The rot should be treated not to be distributed.

# Advocates Day celebration

Lahari Advocates Forum observes Advocates' Day on 3rd December 2010 at Kamat Yatrinivas, Gandhinagar, B'lore 560009.

Sri S Suryanarayana Rao, Founder of Lahari Advocates Forum has consented to be the guest speaker.

Sri Ashok Haranahalli, Advocate General will be the Chief Guest.

Sri K.N. Putte Gowda, president advocates Association Bangalore,

Sri N.S.S.Gupta, former president LAF,

Sri S.N.Prashanth Chandra, former president LAF,

Sri Sadashiv Reddy, former Chairman, Karnataka State Bar Council and

Sri Ramesh Babu, Chairman HSR Law and Social Foundation will the guests of honour.

Please register in advance with
S.V.Srinivas Moorthy, President Lahari Advocates Forum,
9845576321 srinivas60_advocate@rediffmail.com

# Random Reflections

Father, son duo have thrown a challenge contending that out of sixteen former Chief Justices of India only six were definitely honest while no definite opinion can be expressed as to whether the other two were honest or corrupt. The affidavit filed before the Court in the Contempt Proceedings discloses that the remaining eight former Chief Justices were definitely corrupt. Whether the apex court would accept the gauntlet and prove that the scathing criticism is unfounded?

Considering the antecedents of the personalities concerned it can not be said that such a serious allegation would not have come about unless they are found to be absolutely irresponsible.



K.Suryanarayana Rao
98455 29448

Ironically the Court has suo motto invoked contempt jurisdiction to deal with the unprecedented situation. All eyes are riveted on the out come of this imbroglio involving the court and two of its eminent lawyers. Though corruption involving judges is often the hot subject of hushed discussion in the legal circles perhaps it is a unique situation whêre in the members of the Bar have openly asserted that the heads of the judiciary are not above board.

The universality of corruption is periodically highlighted by the media so much so standards have been laid to guage its level countrywise. India does not enjoy respectable position amongst the comity of nations in as much as reputed publications have placed the nation in the lowest level. Members of judiciary being the part of the society find it difficult to insulate theselves from the societal influence! As such the judiciary can not wish away possibilities of finding black sheep within the institution. People expect judiciary to be more sensitive to the expectation of the society and be upright.

Dealing of the matter under the contempt jurisdiction may not be the ultimate solution. The personalities involved have overtly expressed that they are prepared to face the consequences arising out of the present case. Moreover, it may lead to unwarranted situations wherein people who occupied/occupying exalted position being dragged into disrepute. It is also to be noticed that there is no efficacious forum before whom the contemnors can agitate against the corrupt practices indulged by the former Chief Justices. Therefore, it becomes all the more essential for the Supreme Court to devise some effective mechanism which can deal with the problem of corruption involving members of the higher judiciary. If the Supreme Court is of the opinion that it can silence the contemnor it may not be possible in the instant case. Prudence should prevail over emotion.

# CHANGE OF WORKING HOURS

**S.N.Prashanth Chandra**
snpchandra@gmail.com

Apropos to the article in Samvada of November issue on change of working hours of the Court in Bangalore to avoid traffic congestion. I appreciate the lead taken by Communique and Samvada in starting an open debate on the subject

I welcome the move to change Court hours which will be beneficial to all the concerned, lawyers, litigants, court staff and judges..

On this subject I would like to put forth my views and make a few suggestions in support of the Change in Court Timings.

It is well known to all, that many one going infrastructure projects in and around Bangalore including `Namma Metro' have reduced the size of almost all arterial roads in the city. Roads around the areas of the High Court, City Civil Court Complex, and Magistrate Court are no exception. Not only the roads in these areas but the roads leading to these areas are also affected. Traveling time on these roads for reaching from one place to another has gone up in recent times.

The issues here are not just that of the Traffic Congestion and the Metro Project. But also to say that the change in the court timings foster even more efficient functioning of the courts.

The present court timings designed to provide better working conditions have unfortunately become instrumental in wasting man power of the Advocates, Court Staff and litigants. These timings are originally designed to provide working hours to Advocates at their chambers in the morning session and in the evening session. Due to increase in the volume of traffic and reduced size of the roads, Advocates are demanded to leave the office early to reach the court on time effectively leaving no time for chamber work in the morning session. Under the present circumstance, having a working session in the chamber during early part of the day is impossible. Instead of split working sessions in chambers, we can have a long working session after Court hours if Courts are closed by say 3 or 3.30 pm. Another advantage of this is Advocates, judges and Court staff get leisure time to spend with their family to attend to daily chores or to play a meaningful role in the education of their children.

Contd...Page 3

# P.G.C. Chengappa Memorial Lecture

"With the executive assuring aggressive postures during the emergency, the Supreme Court under Chief Justices A.N.Ray and Beg gave way and abdicated its power of judicial review", said S.Rajendra Babu, former Chief Justice of India in a law lecture arranged by Lahari Advocates Forum. He was delivering 4th P.G.C.Chengappa Memorial Lecture in the Patron-in-Chief Hall of the High Court of Karnataka, Bangalore on 19th Nov. 2010. P.G.C. Chengappa was the first President of the Forum.




***From left to right : K.N.Putte Gowda, President, AAB, Chief Justice J.S.Khehar of Karnataka High Court, S.Rajendra Babu, former CJI, and S.V.Srinivas Moorthy, President Lahari Advocates Forum in 4th P.G.C.Chengappa Memorial Lecture***

J| S.Rajendra Babu, delivered the memorial lecture on the subject, "Supreme Court and Democracy".

J.S.Khehar, Chief Justice of Karnataka High Court, was the Chief Guest. K.N.Putte Gowda, President, AAB, was the Guest of Honour and S.V.Srinivas Moorthy presided over the function.

N.Jaya Prakash, life member of Lahari Advocates Forum donated a corpus to the Foundation to conduct memorial lecture. V.N.Murty, Vice President of the Forum and BJG Sathyashree, General Secretary of the Forum were present.

Delivering the memorial lecture, J| Rajendra Babu recollected his association with late P.G.C.Chengappa.

Delving into the subject of Supreme Court and Democracy, J| Babu traced the history and constitution of the Supreme Court of India, nature and finality of its jurisdiction and enforceability of its decrees. "The history of the Court shows that during its decade in the opening 1950-60 finding itself in a Nehruvian era of economic progress, political stability and nascent optimism in the Country, the Court lead by four erudite Chief Justices, Shastri, Mahajan, Mukherji and Das, functioned with commendable dexterity" said Justice Babu on the functioning of the Supreme Court during the first decade of its existence.

Adverting to the next decade, 61-70 of SC's existence and functioning, Jusitce Rajendra Babu explained how Chief Justices Subba Rao, Hidayatullah and Shah went into policy making on a grand scale under the circumstances of crippled economy, political instability and growing immorality of public life in India under Indira Gandhi's rule. He also dealt with the developments of Mrs. Gandhi's aggressive posture and the SC under CJs Ray and Beg abdicating their power of judicial review. J| lamented, "during those few tumultuous years the Court occupied zero existential space in the Indian society".

Referring to bouncing of SC during Janata Government with vengeance against emergency, Justice Babu said that the SC under Chandrachud endorsed policy decisions of the new Government.

Referring to return of power by Mrs.Gandhi, J| Babu termed it as embarrassment to the SC. He also traced the growth of law on Public Interest Litigation during this time and also during the period of CJ Bhagwati as well as efforts made by CJ Bhagwati to regain the lost powers of the Court.

1987 to 2010 witnessed 20 Chief Justices and 8 Prime Ministers, the period also witnessed fragmented politics, unholy nexus of politicians, bureaucrats and criminal, growth of pollution and corruption in public life in a gigantic manner, said the speaker. He also narrated the explosive role being played by the media. He noticed, " urban India will henceforth be dominated by new generation obsessed with computer, e-mail, internet and living in pizza culture". He forecasted "a new life style demanding quick beneficial results will assert.

He concluded the lecture by asserting that the democracy is firmly rooted in India. ◆

*Contd...Page 2*

## CHANGE OF WORKING...

Secondly, the present timing has made commuting/driving in the morning and evening rush hours not only an unpleasant task but also risky.

So I feel the following is the ideal working hours for Courts:

| High Court | Lunch Hour |
|---|---|
| 8: 45 a.m to 12 noon | 12.00 a.m. To 12: 45p.m |
| 12:45 p.m. to 2:45 p.m | |
| **Trial Court** | **Lunch Hour** |
| 9:00 a.m. to 12:00 noon | 12:00 p.m to 12:45 p.m. |
| 12:45p.m. to 3: 15 p.m. | |

If the above said change are adopted, there are many advantages. The approximate average traffic movement in the Court premises across the city are:

| Venue | Two wheelers | Four wheelers |
|---|---|---|
| Civil Court | 1800 | 400 |
| Magistrate Court | 500 | 200 |
| Mayo Hall Court | 300 | 50 |
| High Court | 400 | 600 |

These figures are not taking into account those who commute from these Courts to, Labour Courts, Industrial Tribunal, etc. This is also excluding the vehicles of Judges and litigants.

By adopting change in Court timing we are effectively withdrawing these number of vehicle which are adding to City's traffic. And we get free roads to travel before the rush hour starts.

The possible disadvantage in changing the Court hours is that we have adjusted ourselves to the changed working hours. Many lack willingness to accept change. Secondly, witnesses who come from far off places may find it difficult to reach city centre early. For their convenience, witness examination time in trial Courts may be fixed after 11.00 am.

Thus keeping in mind the advantages and disadvantages I think Courts working hours could be changed for few months on an experimental basis and depending on the results, a final call may be taken. ◆

## ...Sen's impeachment

*Contd...Page 1*

Meanwhile, the Supreme Court probed the incident and found that there was prima facie a case for impeachment. The then CJI Balakrishnan recommended to the Prime Minister for impeachment.

But the then law minister H.R.Bharadwaj did nothing in this direction. therefore, 58 opposition members in Rajya Sabha gave notice of a motion of impeachment.

The chairman constituted a committee consisting Justice Sudershan Reddy of the Supreme Court, Chief Justice Mukul Mudgul of the Punjab and Haryana High Court and Senior Advocate Fali Nariman, before which Sen claimed a right to silence.

The Committee has opined that proceedings under the Judges's Enquiry Act, 1968 is not criminal proceedings and therefore, the delinquent has no right of silence. ◆

## EVENTS & HAPPENINGS

- On 16.11.2010 AAB and Lawyer's Law Book had jointly organized a function to release the book, Complete Law Digest of Supreme Court and Karnataka Cases, authored by Prof.V. Narayana Swamy. The Book was released by J| N.Kumar.
- On 19.11.2010 AAB had organized a function to mark release of stickers for Advocates' vehicles. Stickers were released by S. Suresh Kumar, Minister for Law and Parliamentary Affairs. Bhaskar Rao, Commissioner for Transport and Road Safety and Shankar Bidari, Commissioner of Police were the Chief Guests. K.N.Putte Gowda, President, AAB presided over the function.
- On 26.11.2010 Bangalore unit of Adhivakta Parishad, Karnataka, had organized Law Day in Senate Hall, Bangalore University. J| A.N.Venugopla Gowda was the Chief Guest. Ashok Harnahalli, Senior Advocate and Advocate General was the Chief Speaker and K.N.Putte Gowda, President AAB, presided over the function.
- On 26.11.2010 ABB had organized a function on the occasion of Law Day at Vakeelara Bhavana. J| A.J.Sadashiva spoke on the occasion. K.N.Putte Gowda President AAB, presided over the function.

### Obituary

**We regret to inform the sad demise of the following**

- On 05.11.2010 B.Hiriyanna, Advocate, expired.
- On 18.11.2010 Jnanoba (60), Advocate, expired.

*Crawford Bayley & Co has been appointed as the legal advisor for the first phase of SAIL's follow-on public offer (FPO), which is likely to raise Rs 8,000 crore. The FPO is likely be launched in January-February 2011.*

## ACHIEVEMENTS

Ms.Jyothi M, Advocate, has won 4 gold medals and two silver medals in different events at the XII State Masters Aquatic Championship held on 13th and 14th November at Bangalore.

### BLU results announced

In the election held to the Bangalore Literary Union on 21.11.2010 the following office bearers have been elected.

| | |
|---|---|
| **Divakar Maddur.M** | President |
| **Nityananda S.** | Secretary |
| **Prashant M.M.** | Treasurer |

***Karnataka High Court has condemned the Karnataka state government for its failure to provide adequate housing facilities to judges and buildings for courts. HC observed that this is the duty of the government and "we need not beg for it".***

-*-*-*-*-

***In a set back to Pakistan's stand before United Nations, Jammu and Kashmir has been removed from the UN list of unresolved disputes. Pakistan has been asking the world body to intervene on the issue and direct the Indian government to conduct a plebiscite in the State.***

*The Supreme Court has disapproved the manner of reporting by a section of media relating to the 2G spectrum PIL hearing in the Supreme Court. Court felt that Prime Minster Manmohan Singh's name was unnecessarily dragged.*

*Teckie Lawyer...Only for Advocates...*

*By Mr.Iyer... From, IzeeCo...Eye-Zee-Co...Your Friend in I.T.*

IzeeCo

.....Eye-zee-Co..... Your friend in I.T.

**Trained 110 Advocates in General I.T. and Cyber Crime...**

*13th Batch of Training during Vacation in December, 2010...Contact Mr. Iyer...Mobile:97310-88981*

The following programs to be Launched soon... Complete Peace Of Mind ...Important Necessity for today's Advocate

1) Do not suffer the burden of Hidden Costs anymore... For Trust-worthy service, Avail of our I.T.Services ...Disciplined and Neatly Designed I.T.Service Model in line with International Standards...Only for Advocates.....For your Office and Home...... Anything under the Sun in I.T ...Standardized Rates of Service for Advocates across Bangalore...Genuine Service...High Quality Service Standards
2) Vakil Marriage...www.vakilmarriage.com...Matrimonial Portal on the Internet only for Advocates in India...Strictly only for Advocates and their Children...
3) Good News for Senior Advocates and the Judiciary...Finishing School for Advocates...Advocates made ready for 21st Century Law and Practise... Only for Junior Advocates and Final year Students...Highly Qualified and Reputed Advocates across India would coach the Junior Advocates on Sundays, on the Finer and Refined Aspects of Law through interactive sessions on a variety of topics such as ..

a. Art of Being Positive and to discard negative thoughts and negative discussions,

b. Building a Good Business Image by Appropriate Conduct,

c. Basic Mannerisms for today's Advocate to be on par with International Professional Standards,

d. Creating and Managing a Good Public Image and Professional Image,

e. Qualities to adopt and practice and also those Qualities to ignore and discard,

f. Handling Pressure in the Profession, Interacting with clients from today's younger generation

g. Change your approach to practice of law in Bangalore-The Global Destination for I T and B T; Tactfully handling situations in the Profession and Strategically handling situations in the Profession,...etc

*...Contact Mr.Iyer...Mobile:97310-88981 for Details...*

**Printed & Published by :** S. N. Prashanth Chandra, Owned and on behalf of Lahari Advocates Forum

**Printed at :** Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.

Published at : No. 2980, "Laxmideep", 17th Cross, K.R. Road, BSK II Stage, Bangalore-560 070

**Editor : Aravind. M. Neglur.** **aravindneglur@gmail.com** **KARBIL 01707 / 10 /1/2009-TC**

# ಲಹರಿ ಸಂವಾದ

ಸಂಪುಟ – ೧ | ಶ್ರೀ ವಿಕೃತಿ ನಾಮ ಸಂವತ್ಸರ ಕಾರ್ತಿಕ – ಮಾರ್ಗಶಿರ | ಸಂಚಿಕೆ – ೮


ಒಳಗೇನಿದೆ?


ಪುಟ ೧ : ಸುದ್ದಿ
ಪುಟ ೨ : ಪ್ರಚಲಿತ
ಪುಟ ೩ : ವಿಶೇಷ ಲೇಖನ, ಸುದ್ದಿ
ಪುಟ ೪ : ಅಂಕಣ, ಉಪ್ಪಿನಕಾಯಿ


**ವಕೀಲ ಬಂಧುಗಳಿಗೆ ವಕೀಲ ದಿನಾಚರಣೆಯ ಶುಭಾಶಯಗಳು**

## 'ಕ್ಷಮೆ ಕೇಳಿ': ಸರ್ವೋಚ್ಚ ನ್ಯಾಯಾಲಯ 'ಊಹೂಂ'; ಶಾಂತಿ ಭೂಷಣ್

ನ್ಯಾಯಾಂಗ ನಿಂದನಾ ಕಾಯ್ದೆ, ೧೯೭೧ ಮತ್ತು ಹಲವು ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ನ್ಯಾಯಾಲಯದಲ್ಲಿ ಅಗ್ನಿ ಪರೀಕ್ಷೆ ಎದುರಿಸಲಿದ್ದಾರೆ.

> "ನ್ಯಾಯಾಂಗದಲ್ಲಿ ಭ್ರಷ್ಟಾಚಾರವಿರುವುದು ಸಂಶಯಾತೀತ"
> *ಹಿರಿಯ ವಕೀಲ, ರಾಜೀವ್ ಧವನ್*

ಹಿರಿಯ ವಕೀಲ, ಮಾಜಿ ಕೇಂದ್ರ ಕಾನೂನು ಮಂತ್ರಿ, ಶಾಂತಿ ಭೂಷಣ್ ಸರ್ವೋಚ್ಚ ನ್ಯಾಯಾಲಯಕ್ಕೆ ಅಫಿಡವಿಟ್ಟೊಂದನ್ನು ಸಲ್ಲಿಸಿ ಸರ್ವೋಚ್ಚ ನ್ಯಾಯಾಲಯದ ಹಲವು ಮಾಜಿ ಮುಖ್ಯ ನ್ಯಾಯಾಧೀಶರು ಭ್ರಷ್ಟರು ಎಂದಿದ್ದ ಪ್ರಕರಣದಲ್ಲಿ ಕ್ಷಮೆ ಕೇಳಲು ನಿರಾಕರಿಸಿದ್ದಾರೆ.

'ಕ್ಷಮೆ ಕೇಳುತ್ತೀರಾ?' ಎಂದು ಪ್ರಶ್ನಿಸಿದ ನ್ಯಾಯ ಪೀಠಕ್ಕೆ ಶಾಂತಿ ಭೂಷಣ್, 'ಸೆರೆಮನೆಗೆ ಹೋಗಲು ಸಿದ್ಧ, ಆದರೆ ಕ್ಷಮೆ ಮಾತ್ರ ಕೇಳುವುದಿಲ್ಲ' ಎಂದಿದ್ದಾರೆ.

> "ಇಂಥ ಗಂಭೀರ ವಿಷಯದ ಬಗ್ಗೆ ಹೀಗೆ ಸಾಮಾನ್ಯ ಹೇಳಿಕೆ ನೀಡುವುದು ತರವಲ್ಲ"
> ನ್ಯಾಯಾಲಯದ ನ್ಯಾಯ ಪೀಠ

ಶಾಂತಿ ಭೂಷಣ್‌ರ ಮಗ, ಹಿರಿಯ ವಕೀಲ ಪ್ರಶಾಂತ್ ಭೂಷಣ್ ತೆಹೆಲ್ಕಾ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ ನ್ಯಾಯಾಂಗವನ್ನು ನಿಂದಿಸುವಂತಹ ಅಂಶಗಳಿದ್ದವು ಎಂದು ಆರೋಪಿಸಿ ಅವರ ಮೇಲೆ ಮತ್ತು ಪತ್ರಿಕೆಯ ಮೇಲೆ ಮೊಕದ್ದಮೆ ಹೂಡಲಾಗಿದೆ. ಆ ಪ್ರಕರಣದಲ್ಲಿ ಒಬ್ಬ ಪಕ್ಷಗಾರರಾಗ ಬಯಸಿ ಶಾಂತಿ ಭೂಷಣ್ ಅರ್ಜಿ ಸಲ್ಲಿಸಿದರು. ಅರ್ಜಿಯೊಂದಿಗಿನ ಅಫಿಡವಿಟ್ಟಿನಲ್ಲಿ "ಭಾರತದ ೧೬ ಮಾಜಿ ಮುಖ್ಯ ನ್ಯಾಯಮೂರ್ತಿಗಳ ಪೈಕಿ ೮ ಜನ ಖಂಡಿತವಾಗಿ ಭ್ರಷ್ಟರು, ೬ ಜನ ಖಂಡಿತವಾಗಿ ಪ್ರಾಮಾಣಿಕರು ಮತ್ತು ಉಳಿದ ಇಬ್ಬರ ಬಗ್ಗೆ ನಿರ್ದಿಷ್ಟವಾದ ಅಭಿಪ್ರಾಯ ಹೇಳಲಾಗದು' ಎಂದು ಬರೆದರು. ಇದನ್ನು ಮೇಲ್ನೋಟಕ್ಕೆ ನ್ಯಾಯಾಂಗದ ನಿಂದನೆ ಎಂದು ಪರಿಗಣಿಸಿದ ನ್ಯಾಯಾಲಯ ಅವರ ಮೇಲೆಯೂ ಕ್ರಮಕೈಗೊಳ್ಳಲು ಪ್ರಕ್ರಿಯೆ ಆರಂಭಿಸಿದೆ.

## ಲೋಕಪಾಲ ಮಸೂದೆ ವ್ಯಾಪ್ತಿಗೆ ಪ್ರಧಾನಿ

ಸರ್ಕಾರದಲ್ಲಿ ಆಡಳಿತದಲ್ಲಿ ಪಾರದರ್ಶಕತೆ ತರುವ ದೃಷ್ಟಿಯಿಂದ ಲೋಕಪಾಲ್ ಮಸೂದೆಯ ಬಿಲ್, ಲೋಕಪಾಲ್ ಬಿಲ್, ೧೦೨೦ ಸಿದ್ಧಗೊಂಡು ಸರ್ಕಾರದ ಮುಂದಿದೆ. ಈ ಬಾರಿ ಪ್ರಧಾನಿ ಕೂಡ ಈ ಕಾನೂನಿನ ವ್ಯಾಪ್ತಿಗೆ ಬಂದಿದ್ದಾರೆ.

ಈ ಕಾನೂನಿಗೆ ರೋಚಕ ಇತಿಹಾಸವಿದೆ. ೧೯೬೮ರಲ್ಲಿ ಅಂದಿನ ೪ನೇ ಲೋಕ ಸಭೆಯ ಮುಂದೆ ಈ ಬಿಲ್ ಮೊದಲ ಬಾರಿಗೆ ಮಂಡನೆಯಾಗಿತ್ತು. ಆ ಸಾರಿ ರಾಜ್ಯ ಸಭೆಯಲ್ಲಿ ಬಿಲ್ ಪಾಸಾಗದೆ ಬಿದ್ದು ಹೋಯಿತು.

ನಂತರ ೧೯೭೧, ೧೯೭೭, ೧೯೮೫, ೧೯೮೯, ೧೯೯೬, ೧೯೯೮, ೨೦೦೧, ೨೦೦೫ ಮತ್ತು ೨೦೦೮ರಲ್ಲಿ ಈ ಬಿಲ್ ಮಂಡನೆಯಾಗಿದ್ದು ಒಂದಲ್ಲ ಒಂದು ತೋರಿಕೆಯ ಕಾರಣಗಳಿಗಾಗಿ ಆದರೆ ರಾಜಕೀಯ ಇಚ್ಛಾಶಕ್ತಿ ಇಲ್ಲದ್ದರಿಂದ ಬಿದ್ದು ಹೋಗಿದೆ.

ಸಂವಿಧಾನವನ್ನು ಪುನರ್ವಿಮರ್ಶಿಸಲು ಸರ್ಕಾರ ನೇಮಿಸಿದ್ದ ನ್ಯಾ.ಮೂ. ಎಂ.ಎನ್. ವೆಂಕಟಾಚಲಯ್ಯ ಸಮಿತಿ, ಪ್ರಧಾನಿಯನ್ನು ಈ ಕಾನೂನಿನ ವ್ಯಾಪ್ತಿಯಿಂದ ಹೊರಗಿಡುವಂತೆ ಸೂಚಿಸಿತ್ತು.

ಈ ಬಿಲ್‌ನಲ್ಲಿ ಪ್ರಧಾನಿಯನ್ನು ಕಾನೂನಿನ ವ್ಯಾಪ್ತಿಗೆ ತಂದಿದ್ದರೂ, ಪ್ರಧಾನಿಗೆ ಸುಳ್ಳು ಮೊಕದ್ದಮೆಗಳಿಂದ ಹಲವಾರು ರೀತಿಯ ರಕ್ಷಣೆ ಒದಗಿಸಲಾಗಿದೆ. ಪ್ರಧಾನಿಯ ವಿರುದ್ಧದ ದೂರನ್ನು ಲೋಕಸಭೆಯ ಸ್ಪೀಕರ್ ಅನುಮತಿ ಇಲ್ಲದೆ ಲೋಕಪಾಲರು ಕೈಗೆತ್ತಿಕೊಳ್ಳುವಂತಿಲ್ಲ.

## 'ಪ್ರಶ್ನಾತೀತ ಸಚ್ಚಾರಿತ್ರ್ಯದ ಆಧಾರದ ಮೇಲೆ ನ್ಯಾಯಾಧೀಶರ ನೇಮಕಾತಿಯನ್ನೂ ಪ್ರಶ್ನಿಸಬಹುದಾಗಿದೆ' –ಅಟಾರ್ನಿ ಜನರಲ್

'ಪ್ರಶ್ನಾತೀತ ಸಚ್ಚಾರಿತ್ರ್ಯವೆ ಸಾರ್ವಜನಿಕ ನೇಮಕಾತಿಗೆ ಮಾನದಂಡವಾಗುವುದಾದರೆ, ಇದೆ ಮಾನದಂಡ ಬಳಸಿ ಎಲ್ಲ ನ್ಯಾಯಾಂಗದ ಮತ್ತು ಸಾಂವಿಧಾನಿಕ ನೇಮಕಗಳನ್ನೂ ಪ್ರಶ್ನಿಸಬಹುದಾಗಿದೆ' ಎಂದು ಅಟಾರ್ನಿ ಜನರಲ್ ಗುಲಾಮ್ ವಾಹ್ವನತಿ ಸರ್ವೋಚ್ಚ ನ್ಯಾಯಾಲಯಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.



ಕೇಂದ್ರ ವಿಚಕ್ಷಣಾ ಕಮಿಷನರ್ ಆಗಿ ಸರ್ಕಾರ ನೇಮಿಸಿರುವ ಪಿ.ಜೆ. ಥಾಮಸ್ ಅವರ ನೇಮಕಾತಿಯ ವಿಷಯ ಸರ್ವೋಚ್ಚ ನ್ಯಾಯಾಲಯದ ಮುಂದಿದೆ. ನ. ೨೨ರಂದು ಈ ಪ್ರಕರಣದ ಸುನಾವಣೆ ನ್ಯಾಯಾಲಯದ ಮುಂದೆ ಬಂದಾಗ, ಅಟಾರ್ನಿ ಜನರಲ್ ನೇಮಕಾತಿಯ ಗೌಪ್ಯ ವಿವರಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು.

ನ್ಯಾಯಪೀಠ "ನಾವು ಲಕೋಟೆಯಲ್ಲಿನ ವಿವರಗಳನ್ನಿನ್ನೂ ನೋಡಿಲ್ಲ. ಆದರೆ ಸಂಶಯಾತೀತವಾಗಿ ಸಚ್ಚಾರಿತ್ರ್ಯವಿಲ್ಲದ ವ್ಯಕ್ತಿ, ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿ ಯಾಗಿರುವ ವ್ಯಕ್ತಿ, ಇಂಥ ಸ್ಥಳಕ್ಕೆ ಬರಲು, ಮುಂದುವರಿಯಲು ಹೇಗೆ ಸಾಧ್ಯ?" ಎಂದು ನ್ಯಾಯಪೀಠ ಪ್ರಶ್ನಿಸಿದಾಗ ವಾಹನ್ವತಿ ಪ್ರತಿಕ್ರಿಯಿಸಬೇಕಾಯಿತು. ನಿವೃತ್ತ ಐ.ಎ.ಎಸ್. ಅಧಿಕಾರಿ ಥಾಮಸ್ ಹಲವಾರು ಹಗರಣಗಳಲ್ಲಿ ಭಾಗಿ, ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಬಾಕಿ ಇವೆ, ಆದ್ದರಿಂದ ಅವರು ಈ ನೇಮಕಕ್ಕೆ ಅರ್ಹರಲ್ಲವೆಂದು ಅವರ ನೇಮಕಾತಿಯನ್ನು ನ್ಯಾಯಾಲಯದ ಮುಂದೆ ಪ್ರಶ್ನಿಸಲಾಗಿದೆ.

ಈ ಹಿಂದೆ ಸಿಬಿಐಯನ್ನು ರಾಜಕೀಯ ಪ್ರಭಾವದಿಂದ ಮುಕ್ತಗೊಳಿಸುವ ಕ್ರಮವಾಗಿ ಸರ್ವೋಚ್ಚ ನ್ಯಾಯಾಲಯ ಸಿಬಿಐಯನ್ನು ವಿಚಕ್ಷಣಾ ದಳಕ್ಕೆ ತನಿಖಾ ವಿಷಯದಲ್ಲಿ ಕಾಲದಿಂದ ಕಾಲಕ್ಕೆ ವರದಿ ಮಾಡುವಂತೆ ಆಜ್ಞಾಪಿಸಿತ್ತು.

ಥಾಮಸ್‌ರ ನೇಮಕಾತಿಯನ್ನು ನ್ಯಾಯಾಲಯ ಎತ್ತಿ ಹಿಡಿದರೆ ತನ್ನ ಮೇಲೆ ತನಿಖೆ ನಡೆಸುತ್ತಿರುವ ಸಿಬಿಐಯಿಂದ ತಮ್ಮ ತನಿಖೆಯ ವಿಷಯದಲ್ಲಿ ವಿಚಕ್ಷಣಾ ಕಮಿಷನರ್ ತಾವೆ ವರದಿ ಸ್ವೀಕರಿಸುವಂತಹ ಸಂದಿಗ್ಧ ಪರಿಸ್ಥಿತಿ ಉದ್ಭವವಾಗಲಿದೆ.

## ಕೊಲೆ ಆರೋಪಿಗೆ 'ಉತ್ತಮ ಶಾಸಕ' ಗೌರವ

ಇದನ್ನು ಪ್ರಜಾಪ್ರಭುತ್ವದ ವ್ಯಂಗ್ಯವೆನ್ನಿ, ನಮ್ಮ ವ್ಯವಸ್ಥೆಯ ಅಣಕವೆನ್ನಿ ಅಥವಾ ಇನ್ನು ಯಾವುದೇ ಹೆಸರಿನಿಂದ ಕರೆದರೂ ನಡೆಯುತ್ತದೆ. ಆದರೆ ಸುದ್ದಿಯನ್ನು ಅರಗಿಸಿಕೊಳ್ಳುವುದು ಮಾತ್ರ ದುಸ್ತರವೆನಿಸುತ್ತದೆ. ಝಾರ್‌ಖಂಡದ ವಿಧಾನಸಭೆ ತನ್ನ ಸದಸ್ಯರಲ್ಲಿ ಒಬ್ಬರಾಗಿರುವ ಜನಾರ್ಧನ ಪಾಸ್ವಾನರನ್ನು ಈ ವರ್ಷದ 'ಉತ್ತಮ ಶಾಸಕ' ಎಂದು ಆಯ್ಕೆ ಮಾಡಿ ಈ ಪ್ರಶಸ್ತಿಯನ್ನು ಅವರಿಗೆ ಪ್ರದಾನ ಮಾಡಿದೆ. ಜನಾರ್ಧನ ಪಾಸ್ವಾನ್ ವರ್ಷದ ಹಿಂದೆ ನಡೆದ ಕೊಲೆ ಮೊಕದ್ದಮೆಯಲ್ಲಿನ ಆಪಾದಿತರಲ್ಲಿ ಒಬ್ಬರಾಗಿದ್ದಾರೆ.

ಪ್ರತಿ ವರ್ಷ ರಾಜ್ಯದ ಸ್ಥಾಪನಾ ದಿವಸ ನ. ೨೨ ರಂದು ನಡೆಯುವ ಈ ಸಮಾರಂಭದಲ್ಲಿ ಈ ಬಾರಿ ಪ್ರಶಸ್ತಿ ಸ್ವೀಕರಿಸಿರುವ ಪಾಸ್ವಾನ್, ಛಾತ್ರಾ ಜಿಲ್ಲೆಯ ಬಾಲ ವಿಕಾಸ ಯೋಜನಾಧಿಕಾರಿ ಮೊಹಮ್ಮದ್ ಅಲಿಯವರನ್ನು ಕೊಲೆ ಮಾಡಿದ ಆರೋಪವನ್ನು ಹೊತ್ತುಕೊಂಡೆ ಪ್ರಶಸ್ತಿ ಸ್ವೀಕರಿಸಿದ್ಧಾರೆ.

'ಕೊಲೆ ಆರೋಪಿಗೆ ಶಾಸನ ಸಭೆಯಿಂದ ಗೌರವ ಪ್ರದಾನವೆ?' ಎಂದಿದೆ ಪ್ರಜ್ಞಾವಂತರ ಸಮೂಹ. ಆದರೆ ಅದೊಂದು ಕ್ಷೀಣ ಧ್ವನಿ. ಅದು ಯಾರಿಗೂ ಕೇಳಿಸಿದಂತಿಲ್ಲ.

ದೊಡ್ಡ ದನಿಯಲ್ಲಿ ಪ್ರಶಸ್ತಿ ಪ್ರದಾನವನ್ನು ಸಮರ್ಥಿಸಿಕೊಂಡವರು ಅಸೆಂಬ್ಲಿಯ ಸ್ಪೀಕರ್, ಸಿ.ಪಿ. ಸಿಂಘ್. "ಶಾಸಕರ ಬಗ್ಗೆ ಪೊಲೀಸ್ ದಾಖಲೆಗಳನ್ನು ಪರಿಶೀಲಿಸುವುದು ಪ್ರಶಸ್ತಿ ಪ್ರದಾನ ಸಮಿತಿಯ ಕೆಲಸವಲ್ಲ" ಎಂದಿದ್ದಾರೆ ಸಮಿತಿಯ ಅಧ್ಯಕ್ಷರೂ ಆಗಿರುವ ಸಿಂಘ್.

# ನ್ಯಾಯಾಂಗ ನಿಂದನೆ

**ಪ್ರಚಲಿತ**

ನ್ಯಾಯಾಂಗ ನಿಂದನೆಯ ವಿಷಯ ಮತ್ತೆ ಸುದ್ದಿಯಲ್ಲಿದೆ. ಸರ್ವೋಚ್ಚ ನ್ಯಾಯಾಲಯದ ಕೆಲ ಮಾಜಿ ಮುಖ್ಯ ನ್ಯಾಯಮೂರ್ತಿಗಳು ಭ್ರಷ್ಟರು ಎಂದು ಹೇಳಿ ಹಿರಿಯ ವಕೀಲ, ಮಾಜಿ ಕಾನೂನು ಮಂತ್ರಿ, ಶಾಂತಿ ಭೂಷಣ್ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನೆಯ ಪ್ರಕರಣ ಎದುರಿಸುತ್ತಿದ್ದಾರೆ. ಅದೇ ನ್ಯಾಯಾಲಯದಲ್ಲಿ ಅದೇ ಪ್ರಕರಣದಲ್ಲಿ ಅವರ ಮಗ, ಹಿರಿಯ ವಕೀಲ, ಪ್ರಶಾಂತ್ ಭೂಷಣ್ 'ತೆಹೆಲ್ಕಾ' ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಸಂದರ್ಶನಕ್ಕಾಗಿ ಪತ್ರಿಕೆಯ ಸಂಪಾದಕರೊಂದಿಗೆ ನ್ಯಾಯಾಂಗ ನಿಂದನೆಯ ಮೊಕದ್ದಮೆಯನ್ನು ಎದುರಿಸುತ್ತಿದ್ದಾರೆ. ಇಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಮಗನಿಗೆ ಪರೀಕ್ಷಾ ಅಕ್ರಮವೆಸಗಿ ವಿಶೇಷ ಸವಲತ್ತು ನೀಡಿದ ಬೆಂಗಳೂರು ವಿಶ್ವವಿದ್ಯಾಲಯದ ಬಗ್ಗೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಬರೆದ ಲೇಖನವನ್ನು ನ್ಯಾಯಾಂಗದ ನಿಂದನೆ ಎಂದು ಬಿಂಬಿಸಿ ನ್ಯಾಯಾಲಯದ ಕಟಕಟೆಗೆ ಎಳೆಯಲಾಗಿತ್ತು. ಅಲಹಾಬಾದ್ ಉಚ್ಚ ನ್ಯಾಯಾಲಯದ ನ್ಯಾಯ ವಿತರಣಾ ವ್ಯವಸ್ಥೆ ಕೊಳೆತು ನಾರುತ್ತಿದೆ (rotten) ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಇದೆ ಮಾತನ್ನು ನೊಂದ ಕಕ್ಷಿದಾರ ಹೇಳಿದ್ದರೆ ಅದು ನ್ಯಾಯಾಂಗ ನಿಂದನೆಯಾಗುವ ಅಪಾಯವಿತ್ತು.

- ನ್ಯಾಯಾಂಗ ವ್ಯವಸ್ಥೆಯ ಘನತೆ, ಗೌರವ, ಪಾವಿತ್ರ್ಯವನ್ನು ಎತ್ತಿ ಹಿಡಿಯುವುದು ಕಾನೂನಿನ ಉದ್ದೇಶ.
- ಕಾನೂನಿನ ದುರ್ಬಳಿಕೆಯಾಗಿದ್ದು ಟೀಕಾಕಾರ ಬಾಯಿ ಮುಚ್ಚಿಸಲು.
- ನ್ಯಾಯಾಂಗ ವ್ಯವಸ್ಥೆಯ, ನ್ಯಾಯಾಧೀಶರ ವರ್ತನೆಯ ಮತ್ತು ತೀರ್ಪುಗಳ ನ್ಯಾಯ ಸಮ್ಮತ ವಿಮರ್ಶೆ-ಟೀಕೆ ಅಪರಾಧವಾಗಲಾರದು.

ಈ ಹಿನ್ನೆಲೆಯಲ್ಲಿ ನ್ಯಾಯಾಂಗ ನಿಂದನಾ ಕಾನೂನಿನ ಉಪಯುಕ್ತತೆ, ಅದರ ಲೋಪದೋಷಗಳನ್ನು ಚರ್ಚಿಸುವ ಅವಶ್ಯಕತೆ ಇದೆ.

ಈ ಚರ್ಚೆಯಲ್ಲಿ ಮೊದಲನೆ ಪ್ರಶ್ನೆಯೆಂದರೆ ನಮ್ಮ ನ್ಯಾಯ ವಿತರಣಾ ವ್ಯವಸ್ಥೆಗೆ ನ್ಯಾಯಾಂಗ ನಿಂದನಾ ಕಾನೂನಿನ ಅವಶ್ಯಕತೆ ಇದೆಯೆ? ಎಂಬುದು. ಅವಶ್ಯಕತೆ ಇದೆ. ಏಕೆಂದರೆ,

- ಶಿಕ್ಷೆಯ ಭೀತಿ ಇಲ್ಲದಿದ್ದರೆ ಯಾರೂ ನ್ಯಾಯಾಲಯದ ಆದೇಶ ಪಾಲಿಸದಿರಬಹುದು. ಹಾಗಾದರೆ ನ್ಯಾಯಾಂಗದ ಅಸ್ತಿತ್ವಕ್ಕೇನು ಅರ್ಥ?
- ಕೋರ್ಟಿನ ತೀರ್ಮಾನ ಒಲ್ಲದ ವ್ಯಕ್ತಿ ಅಥವಾ ನ್ಯಾಯಾಧೀಶರನ್ನು ಹೆದರಿಸಿ-ಬೆದರಿಸಿ ತನ್ನ ಪರ ತೀರ್ಪು ಪಡೆಯಲಿಚ್ಛಿಸಿರುವ ಪಕ್ಷಗಾರ ನ್ಯಾಯಾಧೀಶರ ಮೇಲೆ ಇಲ್ಲ-ಸಲ್ಲದ ಆಪಾದನೆ ಮಾಡಿ, 'ನನ್ನ ಪರ ತೀರ್ಪು ಬರೆಯದಿದ್ದರೆ, ಇನ್ನು ಕೀಳು ಮಟ್ಟದ ಆರೋಪ ಮಾಡುತ್ತೇನೆ' ಎಂದು ಹೆದರಿಸಬಹುದು. ಹಾಗಾದರೆ ನಿಷ್ಪಕ್ಷಪಾತ ತೀರ್ಮಾನ ಹೇಗೆ ಸಾಧ್ಯ?

> *We will never use this (Contempt) jurisdiction as a means to uphold our own dignity, That must rest on surer foundation.*
>
> -Lord Denning

ಇಂತಹ ಎರಡು ಸಂದರ್ಭಗಳಿಗೆ ಪರಿಹಾರವಾಗಿ ನ್ಯಾಯಾಂಗ ನಿಂದನಾ ಕಾನೂನು ರೂಪಿಸಲಾಗಿದೆ.

ಮೊದಲನೆ ಅಪರಾಧ ಸಿವಿಲ್ ಸ್ವರೂಪದ್ದಾಗಿದ್ದರೆ ಎರಡನೆಯ ಅಪರಾಧ ಕ್ರಿಮಿನಲ್ ಸ್ವರೂಪದ್ದು. ಇದೆ ಈಗ ಚರ್ಚೆಯ ವಿಷಯ.

**ಇತಿಹಾಸ:** ಭಾರತದ ನ್ಯಾಯಾಂಗ ನಿಂದನಾ ಕಾನೂನಿಗೆ ಇಂಗ್ಲೆಂಡಿನಲ್ಲಿ ಬೆಳೆದು ಬಂದ ನ್ಯಾ.ನಿ.ಕಾನೂನೆ ಸ್ಫೂರ್ತಿ. ಅಲ್ಲಿ ಅದು ಸಾಮಾನ್ಯ ಕಾನೂನಿನ (Common Law) ಭಾಗವಾಗಿ ಬೆಳೆದು ಬಂದಿತು. ಕುತೂಹಲಕರವೆಂದರೆ, ಅಲ್ಲಿ ಈ ಕಾನೂನನ್ನು ೧೯೬೦ರ ವರೆಗೆ ಕ್ರೋಢೀಕರಿಸುವ ಪ್ರಯತ್ನವನ್ನೂ ಮಾಡಿರಲಿಲ್ಲ. ೧೯೬೦ರಲ್ಲಿ ಮೊದಲ ಬಾರಿಗೆ ಈ ಕಾನೂನಿನ ಕೆಲ ಉಪ ಬಂಧಗಳನ್ನು Administration of Justice Act, 1960 ರಡಿ ತರಲಾಯಿತು. ಬಹುಶಃ ಈ ಪ್ರಯತ್ನ ಯಶಸ್ವಿಯಾಗಲಿಲ್ಲವೆಂದು ಕಾಣುತ್ತದೆ. ೭೦ರ ದಶಕದಲ್ಲಿ ಫಿಲಿಮೋರ್ ಸಮಿತಿಯನ್ನು ನೇಮಿಸಿ ಈ ವ್ಯವಸ್ಥೆಯನ್ನು ಪರಾಮರ್ಶಿಸಲು ಕೇಳಿಕೊಳ್ಳಲಾಯಿತು. ಈ ಸಮಿತಿಯ ವರದಿಯನ್ನಾಧರಿಸಿ ೧೯೮೬ರಲ್ಲಿ ಮೊದಲ ಬಾರಿಗೆ ಪೂರ್ಣ ಪ್ರಮಾಣದ Contempt of Court Act, 1986 ನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯ ಉಪಬಂಧಗಳು ಭಾರತದ ಕಾಯ್ದೆಯ ಉಪ ಬಂಧಗಳಂತೆಯೆ ಇದ್ದರೂ ಅಲ್ಲಿ ಅದರ ಮಿಮಾಂಸೆ (interpratation), ಅಲ್ಲಿನ ನ್ಯಾಯಾಲಯ ಈ ಕಾನೂನನ್ನು ಜಾರಿಗೊಳಿಸುವ ರೀತಿ, ಭಾರತಕ್ಕಿಂತ ಸಂಪೂರ್ಣ ಭಿನ್ನ. ಈ ವಿಷಯ ಮುಂದೆ ಬರಲಿದೆ.

**ಭಾರತದಲ್ಲಿ:** ನಮ್ಮಲ್ಲಿ Contempt of Court Act, 1926 ಇಂತಹ ಮೊದಲ ಪ್ರಯತ್ನ. ಅಭಿವ್ಯಕ್ತಿ ಸ್ವಾತಂತ್ರದ ಕಲ್ಪನೆ ಬೆಳೆಯದಿದ್ದ ಆ ದಿನಗಳಲ್ಲಿ ವ್ಯಕ್ತಿ ಸ್ವಾತಂತ್ರದಂತಹ ಉನ್ನತ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳದೆ ಮಾಡಿದ ಕಾಯ್ದೆಯದು.

ಮುಂದೆ ಸ್ವಾತಂತ್ರಾನಂತರ ಸಂವಿಧಾನ ಜಾರಿಗೆ ಬಂದಿತು. ಅಭಿವ್ಯಕ್ತಿ ಸ್ವಾತಂತ್ರ ಸಂವಿಧಾನದ ಅನುಚ್ಛೇದ ೧೯ರ ಮೂಲಕ ಮೂಲಭೂತ ಹಕ್ಕಾಯಿತು. ಆದರೂ ೧೯೫೨ರಲ್ಲಿ ಹೊಸ Contempt of Court Act, 1952 ನ್ನು ಜಾರಿಗೊಳಿಸಿದಾಗ ಅಭಿವ್ಯಕ್ತಿ ಸ್ವಾತಂತ್ರಕ್ಕೆ, ಸತ್ಯಕ್ಕೆ 'ಬೆಲೆ' ಇರಲಿಲ್ಲ. ನ್ಯಾಯಾಂಗದ ವಿರುದ್ಧ, ನ್ಯಾಯಾಧೀಶರ ವಿರುದ್ಧ ಸತ್ಯವಾದ ಆಪಾದನೆಯನ್ನು ನ್ಯಾಯಾಂಗ ನಿಂದನೆ ಎಂದು ತೀರ್ಮಾನಿಸಿ ನಿಂದಕನನ್ನು (contemnor) ಶಿಕ್ಷಿಸ ಬಹುದಾಗಿತ್ತು. ಸಂವಿಧಾನದಡಿ ಅಭಿವ್ಯಕ್ತಿ ಸ್ವಾತಂತ್ರ ೧೯೫೦ರಲ್ಲೆ ದತ್ತವಾಗಿದ್ದರೂ (ಸಂವಿಧಾನ ಜಾರಿಗೊಂಡದ್ದು ೨೬ ಜನವರಿ ೧೯೫೦ರಿಂದ) ನ್ಯಾಯಾಧೀಶರ ಬಗ್ಗೆ ನ್ಯಾಯಾಂಗದ ಬಗ್ಗೆ ನ್ಯಾ.ನಿ. ಕಾನೂನಿನ ಭಯವಿಲ್ಲದೆ ಸತ್ಯ ಹೇಳುವ ಸ್ವಾತಂತ್ರಕ್ಕಾಗಿ ಭಾರತದ ಜನತೆ ಇನ್ನೂ ಕಾಯಬೇಕಾಗಿತ್ತು.

ಈ ಕಾಯ್ದೆಯೂ ಪರಿಪೂರ್ಣವಲ್ಲವೆಂದು ಕಂಡುಕೊಂಡ ಸಂಸತ್ತು ಅದನ್ನು ರದ್ದುಗೊಳಿಸಿ ೧೯೭೧ರಲ್ಲಿ Contempt of Court Act, 1971 ನ್ನು ಜಾರಿಗೊಳಿಸಿತು. ೧೯೭೧ರ ಕಾಯ್ದೆ ಮೊದಲಿನ ಎರಡು ಕಾಯ್ದೆಗಳಿಗಿಂತ ಎಷ್ಟೋ ಪಾಲು ಉತ್ತಮ.

ಈ ಮಧ್ಯೆ ೧೯೫೦ರಲ್ಲಿ ಸಂವಿಧಾನ ಜಾರಿಗೊಂಡಾಗ ಅನುಚ್ಛೇದ ೧೨೯ ಮತ್ತು ೨೧೫ರಂತೆ ಕ್ರಮವಾಗಿ ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯ ಉಚ್ಚ ನ್ಯಾಯಾಲಯಗಳು ತಮ್ಮನ್ನು ನಿಂದಿಸುವವರನ್ನು ಶಿಕ್ಷಿಸಲು ಅಧಿಕಾರ ಪಡೆದುಕೊಂಡವು. ಆದರೆ ಈ ಅಧಿಕಾರದ ಮಿತಿಯೆಂದರೆ,

- ಈ ನ್ಯಾಯಾಲಯಗಳು ಈ ಪರಿಚ್ಛೇದದಡಿ ನಿಂದಕ ನ್ಯಾಯಾಲಯದ ವ್ಯಾಪ್ತಿಯ (Jurisdiction) ಹೊರಗಿದ್ದರೆ ಶಿಕ್ಷಿಸುವಂತಿಲ್ಲ ಮತ್ತು
- ಕೆಳಹಂತದ ನ್ಯಾಯಾಲಯಗಳನ್ನು ನಿಂದಿಸಿದರೆ ಅಂತಹ ಅಪರಾಧಿಯನ್ನು ಈ ಪರಿಚ್ಛೇದಗಳಡಿಯಲ್ಲಿ ಶಿಕ್ಷಿಸಲು ಸಾಧ್ಯವಿಲ್ಲ.

ಈ ಪರಿಮಿತಿಗಳನ್ನು ಮೀರುವ ಉದ್ದೇಶದಿಂದಲೂ ಈಗಿನ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಆದರೆ ಮೊದಲೇ ಹೇಳಿದಂತೆ ಎಷ್ಟೋ ವರ್ಷ 'ಸತ್ಯ'ಕ್ಕೆ ಈ ಕಾಯ್ದೆಯಲ್ಲಿ ಬೆಲೆ ಇರಲಿಲ್ಲ. ಈ ಲೋಪದೋಷವನ್ನು ತೊಡೆದದ್ದು ೨೦೦೬ರ Contempt of Courts (Amendment) Bill, 2006 ಮೂಲಕ.

ಈ ತಿದ್ದುಪಡಿ ಭಾರತ ನ್ಯಾ.ನಿ. ಕಾನೂನಿನ ಬೆಳವಣಿಗೆಯಲ್ಲಿ ಒಂದು ಮಹತ್ವದ ಮೈಲಿಗಲ್ಲು. ಈ ಕಾಯ್ದೆಯ ಸೆ. ೧೩ರಂತೆ ನ್ಯಾಯಾಂಗ ನಿಂದನೆ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗಳಿಗೆ ಅಡೆ ತಡೆ ಉಂಟು ಮಾಡಿದರೆ ಅಥವಾ ಅಡೆ ತಡೆ ಉಂಟು ಮಾಡುವಂತಹ ಸ್ವರೂಪದ್ದಾಗಿದ್ದರೆ ಮಾತ್ರ ನಿಂದಕನನ್ನು ನಿಂದನೆಯ ಆಪಾದನೆಯ ಮೇಲೆ ಶಿಕ್ಷಿಸಬಹುದಾಗಿದೆ.

ತಿದ್ದುಪಡಿಯಿಂದ ಕಾಯ್ದೆಯಲ್ಲಿ ಬಂದಿರುವ ಸೆ. ೧೩ ಬಿ ಪ್ರಕಾರ 'ಜನತೆಯ ಹಿತದೃಷ್ಟಿಯಿಂದ ನ್ಯಾಯಾಲಯ ಯಾವುದೇ ನ್ಯಾ.ನಿ. ಪ್ರಕರಣಗಳಲ್ಲಿ ಸತ್ಯವಾದ ಹೇಳಿಕೆಯನ್ನು ನ್ಯಾಯಾಲಯ ನಿಂದಕನ ಪರವಾಗಿ ಪರಿಶೀಲಿಸಬಹುದಾಗಿದೆ' ಹಾಗೆಂದರೆ ನ್ಯಾಯಾಲಯ ಸತ್ಯವನ್ನು ನಿಂದಕನ ಪರವಾಗಿ ಪರಿಗಣಿಸದೆಯೂ ಇರಬಹುದು.

ಇಲ್ಲಿಯೆ ಈ ಕಾನೂನಿಗೆ ಶಸ್ತ್ರ ಚಿಕಿತ್ಸೆ ಬೇಕಾಗಿರುವುದು. ನಿಂದಕ ಸತ್ಯ ಹೇಳಲು ನ್ಯಾಯಾಲಯ ಬಿಡಬಹುದು ಎಂದರೇನು ಅರ್ಥ? ನಿಂದಕ ಸತ್ಯ ಹೇಳಿದರೆ ನ್ಯಾಯಾಲಯ ಅದನ್ನು ಒಪ್ಪಲೆ ಬೇಕು ಎಂದು ಕಾನೂನಿರಬೇಕ ಅಲ್ಲವೆ?

ಮತ್ತೆ ಇಂಗ್ಲೆಂಡಿನ ವಿಷಯಕ್ಕೆ ಬರೋಣ. ಇಂಗ್ಲೆಂಡಿನಲ್ಲಿ ೧೯೮೭ರಲ್ಲಿ ಸ್ಪೈಕ್ಯಾಚರ್ ಎಂದು ಪ್ರಸಿದ್ಧಿಗೆ ಬಂದ ಪ್ರಕರಣವನ್ನು ಹೌಸ್ ಆಫ್ ಲಾರ್ಡ್ಸ್ (ಇಂಗ್ಲೆಂಡಿನ ಅಂದಿನ ಸರ್ವೋಚ್ಚ ನ್ಯಾಯಾಲಯ)ನ ನ್ಯಾಯಾಧೀಶರು ತೀರ್ಮಾನಿಸಿದರು. ಈ ತೀರ್ಮಾನವನ್ನು ಬ್ರಿಟನ್ನಿನ ಪತ್ರಿಕೆಗಳು ಟೀಕಿಸಿದವು - ಖಾರವಾಗಿಯೇ ಟೀಕಿಸಿದವು. ಡೆಲಿ ಮಿರರ್, ಒಂದು ಹೆಜ್ಜೆ ಮುಂದೆ ಹೋಗಿ ತೀರ್ಪು ನೀಡಿದ ಮೂವರು ನ್ಯಾಯಾಧೀಶರ ಫೋಟೋ ಪ್ರಕಟಿಸಿ ಕೆಳಗೆ ದಪ್ಪಕ್ಷರದಲ್ಲಿ Old fools ಎಂದು ಬರೆಯಿತು. ಇದನ್ನು ಯಾರೂ ನ್ಯಾಯಾಂಗ ನಿಂದನೆ ಎಂದು ಪರಿಗಣಿಸಲಿಲ್ಲ. ಈ ವಿಷಯ ಅಲ್ಲಿಗೆ ಮುಗಿಯಿತು.

ಮುಂದೆ ಈ ನ್ಯಾಯಾಧೀಶರಲ್ಲಿ ಒಬ್ಬರಾಗಿದ್ದ ಲಾರ್ಡ್ ಟೆಂಪ್ಲ್‌ಮನ್ ವಿಚಾರಣಾ ಸಂಕಿರಣವೊಂದಕ್ಕೆ ಭಾರತಕ್ಕೆ ಬಂದಾಗ ಹಿರಿಯ ವಕೀಲ, ನ್ಯಾಯವೇತ್ತ, ಫಾಲಿ ನಾರಿಮನ್ ಟೆಂಪ್ಲ್‌ಮನ್‌ರನ್ನು ಡೆಲಿ ಮಿರರ್ ಮೇಲೆ ನ್ಯಾ.ನಿ. ಪ್ರಕರಣವನ್ನೇಕೆ ದಾಖಲಿಸಲಿಲ್ಲ, ಎಂದು ಕೇಳಿದರು.

> *Judges should not silence critisism with threat of contempt of court but should remove the weakness and draw backs that have crept into judicial system.*
>
> - J|| H.R. Khanna (Retd)

ಅದಕ್ಕೆ ಲಾರ್ಡ್ ಟೆಂಪ್ಲ್‌ಮನ್ ನೀಡಿದ ಉತ್ತರ, "ನಾವು ವೃದ್ಧರು (Old) ಎಂಬುದು ನಿಜ. ನಾವು ಮೂರ್ಖ (fool) ರಲ್ಲ ಎಂದು ಕೊಂಡಿದ್ದೇವೆ. ಬೇರೆ ಯಾರಾದರೂ ನಮ್ಮನ್ನು ಮೂರ್ಖರೆಂದು ಪರಿಗಣಿಸಿದರೆ ಅದು ಅವರ ಅಭಿಪ್ರಾಯ. ನಾವು ಮೂರ್ಖರೆನ್ನುವ ಬದಲು ನಾವು ಅಪ್ರಾಮಾಣಿಕರು, ನಮ್ಮ ಅಂತಃಸಾಕ್ಷಿಯಂತೆ ತೀರ್ಪು ಬರೆದಿಲ್ಲ ಎಂದು ಯಾರಾದರೂ ಹೇಳಿದ್ದರೆ ಆಗ ಮಾತ್ರ ಅದು ನ್ಯಾಯಾಂಗ ನಿಂದನೆಯಾಗುತ್ತಿತ್ತು".

ಹೇಳಿ, ನಮ್ಮಲ್ಲಿ ಈ ಕಾನೂನನ್ನು ಹೀಗೆ ಮಿಮಾಂಸೆ ಮಾಡುವ ಮನೋಭಾವದ ನ್ಯಾಯಾಧೀಶರೆಷ್ಟು ಜನರಿದ್ದಾರೆ? ■

ನಾಲ್ಕನೇಯ ಪಿ.ಜಿ.ಸಿ. ಚೆಂಗಪ್ಪ ಸ್ಮರಣಾರ್ಥ ಉಪನ್ಯಾಸದ ವಿವರಗಳಿಗಾಗಿ ನೋಡಿ ಕಮ್ಯುನಿಕ್ ಪುಟ ೩. -ಸಂ.

**ಬೆಳ್ಳಿ ಬೆಡಗಲ್ಲಿ ಲಹರಿ ಚಳವಳಿ**

ಲೇಖನಮಾಲೆಯ ೪ನೇ ಕಂತು ಅನಿವಾರ್ಯ ಕಾರಣಗಳಿಂದ ಈ ತಿಂಗಳು ಪ್ರಕಟವಾಗಿರುವುದಿಲ್ಲ. ಮುಂದಿನ ತಿಂಗಳಿನಿಂದ ಲೇಖನಮಾಲೆ ಮುಂದುವರಿಯಲಿದೆ. ಸಹಕಾರವಿರಲಿ. -ಸಂ.

# ಭಾರತದಲ್ಲಿ ವಕೀಲ ವೃತ್ತಿಯ ಇತಿಹಾಸ

ವಕೀಲರ ದಿನಾಚರಣೆಯ ಸಂದರ್ಭಕ್ಕಾಗಿ ವಿಶೇಷ ಲೇಖನವಿದು –ಸಂ.

ಈ ಡಿಸೆಂಬರ್ ೩ ರಂದು ಮತ್ತೊಂದು ವಕೀಲರ ದಿನಾಚರಣೆ ಬಂದಿದೆ. ಈ ದಿನ ಸಂತೋಷ ಸಂಭ್ರಮಕ್ಕಷ್ಟೇ ಸೀಮಿತವಲ್ಲ. ವೃತ್ತಿಯ ಬದ್ಧತೆಗೆ ನಮ್ಮನ್ನು ನಾವು ಪುನರ್ ಸಮರ್ಪಿಸಿಕೊಳ್ಳಲು ಒದಗಿ ಬಂದ ಸದವಕಾಶ, ಈ ದಿನಾಚರಣೆ.

ಬದ್ಧತೆ, ಪುನರ್ ಸಮರ್ಪಣೆ ಇವೆಲ್ಲವನ್ನು ಹೇಳಿದಷ್ಟು ಸುಲಭವಾಗಿ ಆಚರಣೆಗೆ ತರುವುದು ಕಠಿಣವೆಂದು ಗೊತ್ತು. ವೃತ್ತಿಯೆಡೆಗೆ ನಿರಂತರ ಬದ್ಧತೆ ಬರುವುದು ನಾವೆಂತಹ ಘನ ಪರಂಪರೆಯ ವಾರಸುದಾರರು ಎಂದು ಅರಿತಾಗ ಮಾತ್ರ, ಹಾಗಾಗಿ ನಮ್ಮ ದಿನಾಚರಣೆಯಂದು ನಮ್ಮ ವೃತ್ತಿಯ ಹುಟ್ಟು, ಇತಿಹಾಸ, ಬೆಳವಣಿಗೆಗಳ ಕಡೆಗೆ ಒಂದು ಪಕ್ಷಿನೋಟ ಬೀರುವುದು ಅತ್ಯವಶ್ಯಕ. ಈ ಸಂದರ್ಭಕ್ಕಾಗಿಯೆ ಈ ಲೇಖನ.



ಜೆ. ರಂಗರಾಜನ್
ವಕೀಲರು
jr-rajan@dataone.in

ಬ್ರಿಟಿಷರು ೧೫ನೇ ಶತಮಾನದ ಕೊನೆಯ ಭಾಗದಲ್ಲಿ ಭಾರತಕ್ಕೆ ಒಂದು ೧೮ ಶತಮಾನದ ಮೊದಲ ಭಾಗದಲ್ಲಿ ಭಾರತದಾದ್ಯಂತ ಬೇರು ಬಿಡುವವರೆಗೂ ಭಾರತದಲ್ಲಿ ಕಾನೂನು ಜಾರಿ ಮತ್ತು ನಿರ್ವಹಣೆಯ ಕೇಂದ್ರಿಕೃತ ವ್ಯವಸ್ಥೆ ಇರಲಿಲ್ಲ. ಆಗ ಇದ್ದ ಹಲವು ಮೊಗಲ್ ದೊರೆಗಳು, ರಾಜರು, ಶ್ರೀಮಂತರು ತಮ್ಮದೆ ನ್ಯಾಯ ವಿತರಣಾ ವ್ಯವಸ್ಥೆಯನ್ನು ರಚಿಸಿಕೊಂಡಿದ್ದರು. ಆ ವ್ಯವಸ್ಥೆ ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಗಳೆರಡನ್ನೂ ನಿಭಾಯಿಸುತ್ತಿತ್ತು. ಈ ಹಂತದಲ್ಲಿ 'ವಕೀಲ" ಹೆಸರಿನ ವೃತ್ತಿದಾರರು ನ್ಯಾಯ ಬೇಡಿ ಬಂದವರ ಅಧಿಕಾರ ಪಡೆದ ಪ್ರತಿನಿಧಿಯಾಗಿ (Power of Attorney) ಕಾರ್ಯ ನಿರ್ವಹಿಸುತ್ತಿದ್ದರು.

ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರಿ ಉದ್ದೇಶವಷ್ಟೆ ಅಲ್ಲದೆ ಭಾರತವನ್ನಾಳುವ ನಿರ್ಣಯ ಕೈಗೊಂಡ ನಂತರ ೧೯೨೬ ರಲ್ಲಿ ಮದ್ರಾಸ್, ಬಾಂಬೆ ಮತ್ತು ಕಲ್ಕತ್ತಾಗಳಲ್ಲಿ ಮೇಯರ್ ನ್ಯಾಯಾಲಯಗಳನ್ನು ಸ್ಥಾಪಿಸಿತು. ಈ ನ್ಯಾಯಾಲಯ ಅಸ್ತಿತ್ವಕ್ಕೆ ಬಂದದ್ದು ಒಂದನೆ ಕಿಂಗ್ ಜಾರ್ಜ್, ೪–೦೯–೧೭೨೬ ರಂದು ಪ್ರದಾನ ಮಾಡಿದ ಸನದಿನಿಂದ. ಈ ಕೋರ್ಟಿನಲ್ಲಿ ನ್ಯಾಯದಾನ ಅಂದು ಬ್ರಿಟನ್ನಿನಲ್ಲಿದ್ದಂತೆ ಇದ್ದೀತು ಎನ್ನುತ್ತದೆ ಇತಿಹಾಸ. ಈ ವ್ಯವಸ್ಥೆ ೧೭೭೪ರ ವರೆಗೆ ಕಾರ್ಯ ನಿರ್ವಹಿಸಿತು.

೧೭೭೪ರಲ್ಲಿ ಅವಿಭಜಿತ ಬಂಗಾಳದ ಫೋರ್ಟ್ ವಿಲಿಯಂನಲ್ಲಿ ಬಂಗಾಳ ಪ್ರಾಂತಕ್ಕಾಗಿ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಲಾಯಿತು. ಈ ನ್ಯಾಯಾಲಯ ಇಂಗ್ಲೆಂಡಿನಲ್ಲಿ ಬೆಳೆದು ಬಂದ ಸಾಮಾನ್ಯ ನ್ಯಾಯ ಮತ್ತು ನ್ಯಾಯ ಸಮ್ಮತತೆಯ (Common law & Equity) ಆಧಾರದ ಮೇಲೆ ನ್ಯಾಯದಾನ ಮಾಡುತ್ತಿತ್ತು. ಈ ನ್ಯಾಯಾಲಯದಲ್ಲಿ ಇಂಗ್ಲೆಂಡ್ ಮತ್ತು ಐರ್ಲೆಂಡಿನ ಬ್ಯಾರಿಸ್ಟರ್‌ಗಳು ಮತ್ತು ಸ್ಕಾಟ್ಲೆಂಡಿನ ಸಾಲಿಸಿಟರ್‌ಗಳಿಗೆ ಮಾತ್ರ ವಕಾಲತ್ತು ವಹಿಸಲು ಅನುಮತಿ ನೀಡಲಾಗಿತ್ತು. ಭಾರತೀಯ ವಕೀಲರಿಗೆ ನ್ಯಾಯಾಲಯದ ಬಾಗಿಲು ಮುಚ್ಚಿತ್ತು ಮತ್ತು ಇಲ್ಲಿನವರಿಗೆ ಕಾನೂನಿನ ವಿದ್ಯಾಭ್ಯಾಸವೂ ಲಭ್ಯವಿರಲಿಲ್ಲ.

ಕಾಲಾಂತರದಲ್ಲಿ ಮೊಗಲ್ ಮತ್ತು ಇತರ ರಾಜರ ನ್ಯಾಯಾಲಯಗಳಲ್ಲಿ ವಕಾಲತ್ತು ವಹಿಸುತ್ತಿದ್ದ ಸಾಂಪ್ರದಾಯಿಕ ವಕೀಲ ವೃತ್ತಿದಾರರಿಗೆ ಇಂಗ್ಲೀಷ್ ನ್ಯಾಯಾಲಯಗಳಲ್ಲಿ ವಕಾಲತ್ತು ವಹಿಸುವ ಅವಕಾಶ ದೊರೆಯಿತು. ಹೀಗೆ ಕೊಡ ಮಾಡಲ್ಪಟ್ಟ ಮೊದಲ ಅವಕಾಶ ಬೆಂಗಾಲ್ ರೆಗ್ಯುಲೇಶನ್ VI, ೧೭೯೩ ರ ಮುಖಾಂತರ. ನಂತರ ಬೆಂಗಾಲ್ ರೆಗ್ಯುಲೇಶನ್ XXVII, ೧೮೧೪ ಈ ಕುರಿತ ಎಲ್ಲಿ ಕಾನೂನನ್ನೂ ಕೋಢಿಕರಿಸಿ ಈ ವಿಷಯದಲ್ಲಿ ಏಕರೂಪತೆಯನ್ನು ತಂದೀತು. ಈ ಕಾನೂನಿನಂತೆ ವಕಿಲ್ ಮತ್ತು ಪ್ಲೀಡರ್‌ಗಳೆಂಬ ಎರಡು ವಿಧದ ವೃತ್ತಿದಾರರ ಸೃಷ್ಟಿಯಾಯಿತು. ಅವರು ಕಾನೂನು ಸಲಹೆಕೊಡಲೂ ಮತ್ತು ಮಧ್ಯಸ್ಥ (Arbitrator) ಎಂದು ಕೆಲಸ ನಿರ್ವಹಿಸಲೂ ಅನುವು ಮಾಡಿಕೊಡಲಾಯಿತು.

ಕಾನೂನು ವೃತ್ತಿದಾರರ ಕಾಯ್ದೆ, ೧೮೪೬ (Legal Practitioners Act) ನಮ್ಮ ವೃತ್ತಿ ಸಂಬಂಧಿ ಮಾಡಿದ ಪ್ರಪ್ರಥಮ ಕಾನೂನು. ಭಾರತೀಯರಿಗೆ ವಕೀಲ ವೃತ್ತಿಯನ್ನು ಕೈಗೊಳ್ಳಲು ಹಕ್ಕು ತಂದುಕೊಟ್ಟ ಪ್ರಥಮ ಕಾನೂನಿದು. ೧೮೫೮ರಲ್ಲಿ ಬ್ರಿಟಿಷ್ ಸರ್ಕಾರ, ಈಸ್ಟ್ ಇಂಡಿಯಾ ಕಂಪನಿಯಿಂದ ಭಾರತದ ಆಡಳಿತವನ್ನು ವಹಿಸಿಕೊಂಡಿತು. ಆ ವರ್ಷದಿಂದ ಭಾರತದಲ್ಲಿ ನ್ಯಾಯಾಡಳಿತ ಬ್ರಿಟಿಷ್ ಸರ್ಕಾರವೆ ನಡೆಸಲಾರಂಭಿಸಿತು.

೧೮೬೧ ರಲ್ಲಿ ಚಾರ್ಟರ್ ಆ್ಯಕ್ಟ್ ಎಂದು ಪ್ರಸಿದ್ಧವಾದ ಭಾರತೀಯ ಉಚ್ಚ ನ್ಯಾಯಾಲಯಗಳ ಕಾಯ್ದೆ ಜಾರಿಗೊಳಿಸಲಾಯಿತು. ಈ ಮೂಲಕ ಸ್ಥಾಪಿತಗೊಂಡ ಉಚ್ಚನ್ಯಾಯಾಲಗಳು ಈ ಹಿಂದೆ ದೇಶದ ವಿವಿಧೆಡೆ ಸ್ಥಾಪಿಸಲಾಗಿದ ಸರ್ವೋಚ್ಚ ನ್ಯಾಯಾಲಯಗಳನ್ನು ರದ್ದುಗೊಳಿಸಿದವು. ಈ ಕಾಯ್ದೆ ವಕೀಲ್, ಬ್ಯಾರಿಸ್ಟರ್ ಮತ್ತು ಸಾಲಿಸಿಟರ್‌ಗಳ ವೃತ್ತಿ ಸಂಬಂಧಿ ನಡುವಳಿಕೆಗಳನ್ನು ನಿಯಂತ್ರಿಸಲು ಉಚ್ಚ ನ್ಯಾಯಾಲಯಕ್ಕೆ ಅಧಿಕಾರ ನೀಡಿತು.

ನಿಜವಾದ ಅರ್ಥದಲ್ಲಿ ವಕೀಲ ವೃತ್ತಿದಾರರಿಗೆ ಸಂಬಂಧಿಸಿದ ಕಾಯ್ದೆಯ ಕ್ರೋಢಿಕರಣ ಪ್ರಾರಂಭವಾಗಿದ್ದು, ಕಾನೂನು ವೃತ್ತಿದಾರರ ಕಾಯ್ದೆ, ೧೮೭೯ (Legal Practitioners' Act), ಬಾಂಬೆ ಪ್ಲೀಡರ್ಸ್ ಆ್ಯಕ್ಟ್, ೧೯೨೦ ಮತ್ತು ಭಾರತೀಯ ವಕೀಲರ ಪರಿಷತ್ತಿನ ಕಾಯ್ದೆ, ೧೯೨೬ (Indian Bar Council Act) ಜಾರಿಗೊಂಡ ನಂತರ. ಈ ಕಾನೂನುಗಳು ಆಯಾ ರಾಜ್ಯದ ಉಚ್ಚ ನ್ಯಾಯಾಲಯ ಅಥವಾ ವಕೀಲರ ಪರಿಷತ್ತಿಗೆ ವಕೀಲರ ವೃತ್ತಿ ನಡುವಳಿಗಳನ್ನು ನಿಯಂತ್ರಿಸುವ ಅಧಿಕಾರ ನೀಡಿದವು.

ವಕೀಲರ ಕಾಯ್ದೆ, ೧೯೬೧ (Advocates Act, Act 25 of 1961) ವಕೀಲರ ವೃತ್ತಿಯಲ್ಲಿ ಏಕರೂಪತೆಯನ್ನು ಸಾಧಿಸಿದ ಕಾನೂನು. ಈ ಕಾಯ್ದೆ ಅಖಿಲ ಭಾರತಕ್ಕೊಂದು ಮತ್ತು ಕೆಳಹಂತದಲ್ಲಿ ಪ್ರತಿ ರಾಜ್ಯಕ್ಕೊಂದು ಬಾರ್ ಕೌನ್ಸಿಲ್ ಸ್ಥಾಪಿಸಲು ಅನುವು ಮಾಡಿಕೊಟ್ಟಿತು. ಅದರಂತೆ ಪ್ಲೀಡರ್, ಸಾಲಿಸಿಟರ್, ವಕಿಲ್, ಮೊದಲಾದ ವಿವಿಧ ರೀತಿಯ ಕಾನೂನು ವೃತ್ತಿದಾರರನ್ನೆಲ್ಲ ವಕೀಲರು (Advocates) ಎಂದೆ ಗುರುತಿಸಲಾಗುತ್ತಿದ್ದು, ಈಗ ಎಲ್ಲ ಕಾನೂನು ವೃತ್ತಿದಾರರೂ ವಕೀಲರೆ.

ನಮ್ಮನ್ನು ನಿಯಂತ್ರಿಸಿಕೊಳ್ಳುವದರೂ ನಾವೆ. ಎಂದರೆ ನಮ್ಮಿಂದ ಬಾರ್ ಕೌನ್ಸಿಲ್‌ಗೆ ಆಯ್ಕೆಯಾದ ವಕೀಲರೆ ವೃತ್ತಿ ಸಂಬಂಧಿ ಸಂಗತಿಗಳನ್ನು ನಿಯಂತ್ರಿಸುವವರು.

- ಸುಮಾರು ನಾಲ್ಕು–ಐದು ಶತಮಾನದಷ್ಟು ಹಳೆಯ ಉಚ್ಚ ಪರಂಪರೆಯ ವಾರಸುದಾರರು ನಾವು.
- ನಮ್ಮನ್ನು ನಾವೆ ನಿಯಂತ್ರಿಸಿಕೊಳ್ಳಬೇಕು. ನಾವು ಯಾರ ಕೈಕೆಳಗೂ ಕರ್ತವ್ಯ ನಿರ್ವಹಿಸುವುದಿಲ್ಲ.
- ಕಾನೂನು ವೃತ್ತಿ ನಮಗಾಗಿ ಮೀಸಲಿಟ್ಟ ಅನನ್ಯ ಕ್ಷೇತ್ರ.

ಈ ಮೂರು ಸಂಗತಿಗಳನ್ನು ಸದಾ ಜ್ಞಾಪಕದಲ್ಲಿಟ್ಟುಕೊಂಡು ವೃತ್ತಿಯ ಘನತೆ, ಗೌರವಗಳನ್ನು ಸದಾ ಎತ್ತಿ ಹಿಡಿದಿರಲು ಈ ವಕೀಲರ ದಿನಾಚರಣೆಯಂದು ಪಣ ತೊಡೋಣ.

## ಗೂಂಡಾ ನ್ಯಾಯಾಧೀಶ

ಅಲ್ಲಿ ಝಾರ್‌ಖಂಡ ವಿಧಾನ ಸಭೆ ಕ್ರಿಮಿನಲ್ ಆರೋಪ ಹೊತ್ತಿರುವ ವ್ಯಕ್ತಿಯೊಬ್ಬರಿಗೆ 'ಉತ್ತಮ ಶಾಸಕ' ಪ್ರಶಸ್ತಿ ನೀಡಿದರೆ ಇಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಕ್ರಿಮಿನಲ್ ಆಪಾದನೆಯನ್ನು ಹೊತ್ತು ಪೊಲೀಸರ ದಾಖಲೆಗಳಲ್ಲಿ ರೌಡಿ ಚರಿತ್ರೆ ಹೊಂದಿದ ವಕೀಲರೋರ್ವರನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೆಂದು ನೇಮಿಸಿತ್ತು!

ನಂಬಿಕೆಯಾಗಲಿಲ್ಲವೆ? ಕರ್ನಾಟಕ ಉಚ್ಚ ನ್ಯಾಯಾಲಯ ಹೀಗೆ ಮಾಡಿದ್ದನ್ನು ಸರ್ವೋಚ್ಚ ನ್ಯಾಯಾಲಯವೆ ಎತ್ತಿ ತೋರಿಸಿದೆ.

ವಿವರಗಳು ಹೀಗಿವೆ: ಖಾಜಿಯಾ ಮೊಹಮ್ಮದ್ ಮುಝುಮ್ಮಿಲ್ ವಕೀಲರು. ಅವರ ಹೆಸರು ಕಾರವಾರದ ಪೊಲೀಸರ 'ಕಮ್ಯುನಲ್ ಗೂಂಡಾ' ಪಟ್ಟಿಯಲ್ಲಿತ್ತು. ಆ ಪಟ್ಟಿಯಿಂದ ತನ್ನ ಹೆಸರನ್ನು ಕೈಬಿಡುವಂತೆ ಕೋರಿ ಅವರು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಪಿಟಿಷನ್ ಸಲ್ಲಿಸಿದ್ದರು. ನ್ಯಾಯಾಲಯ ಅವರ ಅರ್ಜಿಯನ್ನು ವಜಾ ಮಾಡಿತ್ತು. ಅವರ ಹೆಸರು ಆ ಪಟ್ಟಿಯಲ್ಲಿಯೆ ಇದ್ದಾಗ ಉಚ್ಚ ನ್ಯಾಯಾಲಯ ಅವರನ್ನು ಜಿಲ್ಲಾ ಮತ್ತು ಸತ್ರ ನ್ಯಾಯಧೀಶರೆಂದು ಆಯ್ಕೆ ಮಾಡಿತು. ಆ ಪ್ರಕಾರ ಕೆಲಸಕ್ಕೆ ಸೇರಿದ ಅವರು ಮೂರು ವರ್ಷದ ಮೇಲೆ ಹತ್ತು ತಿಂಗಳ ಕಾಲ ನ್ಯಾಯಾಧೀಶರೆಂದು ಕೆಲಸವನ್ನೂ ನಿರ್ವಹಿಸಿದರು!

ನಂತರ ಅದು ಹೇಗೋ ಈ ಹಿನ್ನೆಲೆಯೆಲ್ಲ ಬೆಳಕಿಗೆ ಬಂದು 'ಈ ಹುದ್ದೆಯಲ್ಲಿರಲು ನೀವು ಸೂಕ್ತ ವ್ಯಕ್ತಿಯಲ್ಲ', ಎಂದು ಕಾರಣ ಹೇಳಿ ಅವರನ್ನು ಸೇವೆಯಿಂದ ವಜಾ ಮಾಡಲಾಯಿತು.

ಮುಂದಿನ ಕಥೆ ಇನ್ನೂ ಆಸಕ್ತಿದಾಯಕವಾಗಿದೆ. ವಜಾಗೊಂಡ ನ್ಯಾಯಾಧೀಶರು ವಜಾ ಆದೇಶವನ್ನು ಪ್ರಶ್ನಿಸಿ ನ್ಯಾಯಾಲಯದ ಕಟ್ಟೆ ಏರಿದರು. ಅವರ ಅಪೀಲ್ ಸರ್ವೋಚ್ಚ ನ್ಯಾಯಾಲಯವನ್ನು ತಲುಪಿದಾಗ ಪ್ರತಿವಾದಿಯಾಗಿದ್ದ ಕರ್ನಾಟಕ ಉಚ್ಚ ನ್ಯಾಯಾಲಯ ವಜಾ ಮಾಡಿದ ತನ್ನ ಕ್ರಮವನ್ನು ಸರಿಯಾಗಿ ಸಮರ್ಥಿಸಿಕೊಳ್ಳಲೂ ಇಲ್ಲವೆಂಬುದು ಸರ್ವೋಚ್ಚ ನ್ಯಾಯಾಲಯಕ್ಕೆ ಅಸಮಾಧಾನ ತಂದಿತು.

With some amount of anguish, we must also notice that the High Court appears to be callous about the whole matter ಎಂದಿದೆ ಸರ್ವೋಚ್ಚ ನ್ಯಾಯಾಲಯ.

## ಕೊಚ್ಚಿ ಬಂದರು: ಇ–ತ್ಯಾಜ್ಯ ಆಮದಿಗೆ ಹೆಬ್ಬಾಗಿಲು

ಕೇರಳದ ಕೊಚ್ಚಿ, ಇಲೆಕ್ಟ್ರಾನಿಕ್ ತ್ಯಾಜ್ಯ ವಸ್ತುಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳ ಬಯಸುವವರಿಗೆ ಹೆಬ್ಬಾಗಿಲಾಗಿದೆ ಎಂದು ಡೈರೆಕ್ಟೊರೇಟ್ ಆಫ್ ರೆವೆನ್ಯು ಇಂಟೆಲಿಜೆನ್ಸ್ ಪತ್ತೆ ಹಚ್ಚಿದೆ.

ದೇಶದಾದ್ಯಂತ ಕೊಚ್ಚಿಗಿಂತ ದೊಡ್ಡದಾದ ಮುಂಬೈ, ಕಾಂಡ್ಲಾ, ಚೆನ್ನೈ, ಪರದೀಪ್, ಮಂಗಳೂರು, ವಿಶಾಖ ಪಟ್ನಂ ಮೊದಲಾದ ಬಂದರುಗಳಿದ್ದರೂ ಇ– ತ್ಯಾಜ್ಯ ವಸ್ತುಗಳ ಅಮದಿಗೆ ಕೊಚ್ಚಿ ಬಂದರು ಹೆಬ್ಬಾಗಿಲಾಗಿದೆ.

ದೇಶದಾದ್ಯಂತಹ ಬೇರೆ ಬಂದರುಗಳಲ್ಲಿ ಆಮದಿನ ವಿಷಯದಲ್ಲಿ ಇರುವ ಬಿಗಿ, ಕಟ್ಟು–ನಿಟ್ಟು ಕೊಚ್ಚಿ ಬಂದರಿನಲ್ಲಿ ಇಲ್ಲದಿರುವುದೇ ಈ ಕಳ್ಳ ವ್ಯವಹಾರಕ್ಕೆ ಕಾರಣ.

ಕಂಪ್ಯೂಟರ್, ಫೋನ್, ಫೋಟೋ ಕಾಪಿಯರ್, ಮೊಬೈಲ್ ಹ್ಯಾಂಡ್‌ಸೆಟ್‌ಗಳನ್ನು ಬಳಸಿ ಎಸೆದ ಕಸವೆ ಎಲೆಕ್ಟ್ರಾನಿಕ್ ತ್ಯಾಜ್ಯ. ಇಂಗ್ಲೆಂಡ್, ಅಮೇರಿಕಾ ಮತ್ತು ಕೊರಿಯಾಗಳಿಗೆ ತಮ್ಮ ನಾಗರಿಕರು ಬಳಸಿ ಬಿಸಾಡುವ ಎಲೆಕ್ಟ್ರಾನಿಕ್ ಸರುಕುಗಳ ನಿರ್ವಹಣೆ ಮತ್ತು ವಿಲೇವಾರಿ ಒಂದು ಗಂಭೀರ ಸಮಸ್ಯೆಯಾಗಿರುವುದರಿಂದ ಆ ರಾಷ್ಟ್ರಗಳು ಕಂಡುಕೊಂಡಿರುವ ಪರಿಹಾರವೆಂದರೆ ಇ – ತ್ಯಾಜ್ಯವನ್ನು ಪುನರ್ ಉಪಯೋಗಿಸುವ ಹೆಸರಿನಲ್ಲಿ ಭಾರತದಂತಹ ದೇಶಕ್ಕೆ ರಫ್ತು ಮಾಡುವುದು

ಭಾರತದಲ್ಲಿ ಇ– ತ್ಯಾಜ್ಯವನ್ನು ನಿಯಂತ್ರಿಸುವ ಕಾನೂನು ೨೦೦೮ರ ವರೆಗೂ ಇರಲಿಲ್ಲ. ೨೦೦೮ ರಲ್ಲಿ ಪರಿಸರ ರಕ್ಷಣಾ ಕಾಯ್ದೆಯಡಿ ರೂಪಿಸಿದ ಅಪಾಯಕಾರಿ ತ್ಯಾಜ್ಯ (ನಿರ್ವಹಣೆ, ಬಳಕೆ ಮತ್ತು ಅಂತರ ಗಡಿ ಸಾಗಣೆ) ನಿಯಮಗಳು, ೨೦೦೮. ಇಂತಹ ಮೊದಲ ಕಾನೂನು. ಭಾರತ ಈ ಕಾನೂನನ್ನು ಮಾಡಿದ್ದೂ ತನ್ನ ಸದ್ಬುದ್ಧಿಯಿಂದಲ್ಲ, ವಿಶ್ವಸಂಸ್ಥೆಯ ಬೆಸೆಲ್ ಕನ್‌ವೆನ್‌ಷನ್‌ನ ಒತ್ತಡದಿಂದ.

# ಮಧ್ಯಸ್ಥಿಕೆ – ನ್ಯಾಯಾಂಗದ ಸುಧಾರಣೆ ವಕೀಲರ ಜವಾಬ್ದಾರಿ

## Just ಮಾತ್ ಮಾತಲ್ಲಿ...

ಕೆಲವೇ ವರ್ಷಗಳ ಹಿಂದಿನ ಭಾರತದ–ಭಾರತೀಯರ ಸ್ಥಿತಿಯನ್ನು ನೆನಪಿಸಿಕೊಳ್ಳೋಣ. ಒಂದು ಪರಸ್ಥಳದ ದೂರವಾಣಿಯ ಕರೆಗೆ ಪಿ. ಆ್ಯಂಡ್ ಟಿ. ಕಂಪೆನಿಯ ಮೂಲಕ ನಂಬರ್ ನೊಂದಾಯಿಸಿ ಹಲವಾರು ಗಂಟೆಗಳ ಕಾಲ ದೂರವಾಣಿಯ ಬಳಿಯೇ ಕಾದು ಕುಳಿತು ಕರೆಯನ್ನು ಪಡೆಯುತ್ತಿದ್ದೆವು. ನೂತನ ದೂರವಾಣಿಯ ಸಂಪರ್ಕ ಪಡೆಯಲು ನೊಂದಾಯಿಸಿದಲ್ಲಿ ಹಲವಾರು ವರ್ಷಗಳು ಸಂಪರ್ಕಕ್ಕಾಗಿ ಕಾಯಬೇಕಾಗಿತ್ತು. ಕೆಲವು ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳನ್ನು ಖರೀದಿಸಲು ಡಾಲರ್ ಮೂಲಕ ಹಣವನ್ನು ಪಾವತಿಸಿ ವರ್ಷಗಳವರೆಗೆ ಕಾದು ಪಡೆಯಬೇಕಾಗಿತ್ತು.


ಎಸ್.ಎನ್. ಪ್ರಶಾಂತ ಚಂದ್ರ
snpchandra@gmail.com

ರೈಲು, ಬಸ್ಸು ಮತ್ತು ವಿಮಾನಗಳಲ್ಲಿ ಪ್ರಯಾಣ ಮಾಡಲು ಹಲವಾರು ಗಂಟೆ ಸರದಿ ಸಾಲಾಗಿ ನಿಂತು ಟಿಕೆಟ್ ಪಡೆಯುತ್ತಿದ್ದೆವು. ದೂರ ಪ್ರಯಾಣಕ್ಕೆ ವಿವಿಧೆಡೆಗಳಿಂದ ಹಸಿರು ನಿಶಾನೆ ದೊರೆಯದೇ ಪ್ರಯಾಣ ಮಾಡುವುದು ಅಸಾಧ್ಯದ ಮಾತೇ ಆಗಿತ್ತು. ತಂತಿ ಸಂದೇಶವನ್ನು ಮಾಡಲಿಕ್ಕೆ ಸಮಯ ವ್ಯರ್ಥ ಮಾಡುತ್ತಿದ್ದುದನ್ನು ನಾವು ಮರೆಯಲಿಕ್ಕಿಲ್ಲ.

ಇತ್ತೀಚಿನ ವರ್ಷಗಳಲ್ಲಿ ಹಲವಾರು ಕ್ಷೇತ್ರಗಳಲ್ಲಿ ಆದಂತಹ ಕ್ರಾಂತಿಕಾರಕ ಬದಲಾವಣೆಗಳು ನಮಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಬ್ಯಾಂಕಿಂಗ್ ವ್ಯವಹಾರದಲ್ಲಿ ಆಗುತ್ತಿರುವ ಕ್ರಾಂತಿಕಾರಕ ಬದಲಾವಣೆ ಬಹಳ ವಿಸ್ಮಯಕಾರಿಯಾಗಿದೆ. ಒಟ್ಟಿನಲ್ಲಿ ಗ್ರಾಹಕರ ದೃಷ್ಟಿಯಿಂದ ವೀಕ್ಷಿಸಿದಾಗ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರದಲ್ಲಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳು ಬಂದು, ನಮ್ಮ ಯೋಚನಾ ಶಕ್ತಿಗೆ ಮೀರಿ ಪರಿಸ್ಥಿತಿ ಬದಲಾಗಿದೆ. ಅಷ್ಟೇ ಅಲ್ಲ, ಈ ಎಲ್ಲದರ ವಿಶೇಷವೇನೆಂದರೆ ಈ ಬದಲಾವಣೆಗಳಿಂದ ಸರಕುಗಳ – ಸೇವೆಗಳ ಬೇಡಿಕೆ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ಸರಕು ಸಾಮಗ್ರಿಗಳನ್ನು, ವಿವಿಧ ಸೇವೆಗಳನ್ನು ಗ್ರಾಹಕನಿಗೆ ತಲುಪಿಸುವಲ್ಲಿ ಕ್ರಾಂತಿಕಾರಕ ಬದಲಾವಣೆಯಾದಂತೆಲ್ಲ ಗ್ರಾಹಕರಲ್ಲಿ ಅದರ ಬೇಡಿಕೆ ಹೆಚ್ಚಾಗುತ್ತಿದೆ.

> "ವ್ಯಾಜ್ಯ ಪೂರ್ವ ಮತ್ತು ವ್ಯಾಜ್ಯಕಾಲದ ಮಧ್ಯಸ್ತಿಕೆಯಿಂದ ನ್ಯಾಯಾಂಗದ ಮೇಲಿನ ಹೊರೆ ಇಳಿಸಲು ಸಾಧ್ಯ".

ಈ ಆಧುನಿಕ ಸಮಾಜದಲ್ಲಿ ಈ ಮೇಲೆ ಹೇಳಿದ ಕ್ರಾಂತಿಕಾರಕ ಬದಲಾವಣೆಗಳನ್ನು ನಮ್ಮ ನ್ಯಾಯಾಂಗ ವ್ಯವಸ್ಥೆಗೆ ಹೋಲಿಸಿದಾಗ ಎಷ್ಟೋ ವರ್ಷಗಳಿಂದ ಬದಲಾವಣೆಯೆ ಇಲ್ಲದ ಕ್ಷೇತ್ರವೆಂದರೆ ನ್ಯಾಯಾಂಗವೊಂದೆ ಎಂದು ತಕ್ಷಣ ಹೊಳೆಯುತ್ತದೆ.

ಈ ವ್ಯವಸ್ಥೆ ಹಳೆಕಾಲದ ಪಳೆಯುಳಿಕೆಯಾಗಿಯೆ ಇದೆ. ನ್ಯಾಯದಾನದಲ್ಲಿ ವಿಳಂಬ ಎಂದಿನಿಂದಲೂ ಇದೆ. ನ್ಯಾಯಾಂಗ ವ್ಯವಸ್ಥೆಯು ಫಲಪ್ರದವಾಗಿಲ್ಲ ಮತ್ತು ವೆಚ್ಚವೂ ಸಹ ಅಧಿಕ ಎಂಬ ಕೂಗು ಎಂದಿನಿಂದಲೂ ಇದೆ. ಅಷ್ಟೇ ಅಲ್ಲ ಕಕ್ಷಿದಾರನ ಅಪೇಕ್ಷೆಗೆ ಸರಿಯಾಗಿ ಸೌಲಭ್ಯ ದೊರಕುತ್ತಿಲ್ಲ ಎಂದು ಆರೋಪವು ಸಹ ಕೇಳಿ ಬರುತ್ತಿದೆ. ಈ ಕಾರಣಗಳಿಂದಾಗಿ ನ್ಯಾಯಾಲಯಕ್ಕೆ ಮೊರೆ ಹೋಗುವವರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಕಾನೂನಿನ ಪ್ರಕ್ರಿಯೆಯ ಅವಶ್ಯಕತೆ ತುರ್ತಾಗಿದ್ದು, ಬೇರೆ ಯಾವುದೇ ಮಾರ್ಗೋಪಾಯಗಳಿಲ್ಲದಿದ್ದಾಗ ಮಾತ್ರ ಕಕ್ಷಿಗಾರರು ನ್ಯಾಯಾಲಯಕ್ಕೆ ಬರುತ್ತಿದ್ದಾರೆ. ಬಹಳಷ್ಟು ವ್ಯಾಜ್ಯಗಳು ಮತ್ತು ಘರ್ಷಣೆಗಳು ಇದ್ದರೂ ಸಹ ಕೆಲವು ನಿರ್ದಿಷ್ಟ ಸ್ವರೂಪದ ಪ್ರಕರಣಗಳು ಮಾತ್ರ ನ್ಯಾಯಾಲಯಗಳಲ್ಲಿ ದಾಖಲಾಗುತ್ತಿವೆ. ಕಕ್ಷಿದಾರರು ಬೇರೆ ಬೇರೆ (ಅವೈಜ್ಞಾನಿಕ ಮತ್ತು ಕಾನೂನೇತರ) ಮಾರ್ಗಗಳ ಮೂಲಕ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇವೆಲ್ಲವೂ ಸಮಾಜದ ಮೇಲೆ ಹೊರೆಯಾಗಿ, ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಹೆಚ್ಚಾಗಿ ಸಾಮಾಜಿಕ ಭದ್ರತೆ ಇಲ್ಲದಂತಾಗಿದೆ. ಇದು ವಕೀಲ ವೃತ್ತಿಯ ಮೇಲೆ ಸಹ ಪರೋಕ್ಷವಾಗಿ ಪ್ರಭಾವ ಬೀರುತ್ತಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿನ ವಿಳಂಬಕ್ಕೆ ವಕೀಲರೇ ಕಾರಣ ಎಂಬ ಅಭಿಪ್ರಾಯ ಜನಸಾಮಾನ್ಯರಲ್ಲಿ ಮೂಡುತ್ತಿದೆ.

ಜನಸಾಮಾನ್ಯರಲ್ಲಿನ ಈ ರೀತಿಯ ಅಭಿಪ್ರಾಯಗಳನ್ನು ದೂರಮಾಡುವುದು ನ್ಯಾಯಾಂಗ ವ್ಯವಸ್ಥೆ ಮತ್ತು ವಕೀಲ ವೃತ್ತಿಯ ದೃಷ್ಟಿಯಿಂದ ಅತ್ಯಗತ್ಯ. ಬೇರೆ ಸೇವಾ ಕ್ಷೇತ್ರಗಳಲ್ಲಿ ಯಾವ ರೀತಿಯ ಕ್ರಾಂತಿಕಾರಕ ಬದಲಾವಣೆಗಳು ಆಗುತ್ತಿದೆಯೋ ಅದೇ ರೀತಿ ನ್ಯಾಯಾಂಗ ವ್ಯವಸ್ಥೆಯಲ್ಲಿಯೂ ಸಹ ಗ್ರಾಹಕನ ಹಿತದೃಷ್ಟಿಯಿಂದ ಬದಲಾವಣೆಯನ್ನು ತರುವುದು ಪ್ರತಿಯೊಬ್ಬ ವಕೀಲರ ಆದ್ಯ ಕರ್ತವ್ಯ. ಈ ರೀತಿಯ ಬದಲಾವಣೆಯನ್ನುಂಟು ಮಾಡಲು ವಕೀಲರ ಪಾತ್ರ ಹಿರಿಯದಾಗಿರುತ್ತದೆ.

ಈ ಸಂದರ್ಭದಲ್ಲಿ ಸಂಧಾನ–ಮಧ್ಯಸ್ಥಿಕೆಯ ಪ್ರಕ್ರಿಯೆ ಗ್ರಾಹಕ–ಸ್ನೇಹಿಯಾಗಿ, ನ್ಯಾಯಾಂಗ ವ್ಯವಸ್ಥೆಯ ಹೊರೆ ಇಳಿಸುವ ಸುಲಭ ಸಾಧನವಾಗಿ ನಮಗೆಲ್ಲ ಲಭ್ಯವಾಗಿದೆ. ಮಧ್ಯಸ್ಥಿಕೆಯ ಅಳವಡಿಕೆಯಿಂದ, ಸುಲಭ, ಶೀಘ್ರ, ಸರಳ, ದುಬಾರಿಯಲ್ಲದ ಮತ್ತು ಪರಿಣಾಮಕಾರಿಯಾದ ನ್ಯಾಯ ವಿತರಣೆ ಸಾಧ್ಯ ಎಂಬುವುದರಲ್ಲಿ ಸಂದೇಹವಿಲ್ಲ. ಕೇವಲ ಕೆಲವೇ ವರ್ಷಗಳಲ್ಲಿ ಮಧ್ಯಸ್ಥಿಕೆ ಪಡೆದಿರುವ ಪ್ರಾಧ್ಯಾನತೆ ಇದಕ್ಕೆ ಸಾಕ್ಷಿ.

ವ್ಯಾಜ್ಯಪೂರ್ವ ಮಧ್ಯಸ್ಥಿಕೆ ಅಳವಡಿಕೆ ಕೂಡ ಮುಂದಿನ ದಿನಗಳಲ್ಲಿ ಪರಿಣಾಮಕಾರಿ ಬೆಳವಣಿಗೆಯಾಗಿ ಮೂಡಿಬರಬಹುದು ಎಂಬುವುದರಲ್ಲಿ ಯಾವುದೇ ಸಂದೇಹವಿಲ್ಲ. ಒಂದು ವಿವಾದ ಅಥವಾ ವ್ಯಾಜ್ಯವನ್ನು ಅತೀ ಶೀಘ್ರವಾಗಿ ಮತ್ತು ಅತೀ ಕಡಿಮೆ ಖರ್ಚಿನಲ್ಲಿ ನ್ಯಾಯಾಲಯದಲ್ಲಿ ದಾವೇ ಹೂಡುವ ಮುನ್ನವೇ ಹೇಗೆ ಬಗೆಹರಿಸಿಕೊಳ್ಳಬೇಕು, ಅದರಲ್ಲೂ ವ್ಯಾಜ್ಯ ಪೂರ್ವ ಮಧ್ಯಸ್ಥಿಕೆಗಳು ವಿವಾದಗಳನ್ನು ಬಗೆಹರಿಸಲು ಯಾವ ರೀತಿಯ ಫಲವನ್ನು ನೀಡುತ್ತದೆ ಎಂಬುವುದನ್ನು ಸಮಾಜಕ್ಕೆ ಮತ್ತು ಕಕ್ಷಿದಾರರಿಗೆ ಮನದಟ್ಟು ಮಾಡಿಕೊಡುವುದು ಅತ್ಯಂತ ಅವಶ್ಯಕವಾಗಿರುತ್ತದೆ.

ಈ ಪರಿಕಲ್ಪನೆಯನ್ನು ಜನಪ್ರಿಯಗೊಳಿಸುವುದರಲ್ಲಿ ವಕೀಲರ ಪಾತ್ರ ಮಹತ್ವದ್ದಾಗಿರುತ್ತದೆ. ವಕೀಲರ ದಿನಾಚರಣೆಯ ಈ ಸಂದರ್ಭದಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಧ್ಯಸ್ಥಿಕೆ ಮತ್ತು ವ್ಯಾಜ್ಯ ಪೂರ್ವ ಸಂಧಾನ ಮಧ್ಯಸ್ಥಿಕೆಗಳ ಮೂಲಕ ಗ್ರಾಹಕರಿಗೆ ನ್ಯಾಯ ವಿವರಣೆ ಮಾಡಲು ಪಣತೊಡೋಣ. ಈ ಬೆಳವಣಿಗೆಯಿಂದ ಗ್ರಾಹಕ ಸಂತುಷ್ಟನಾಗುತ್ತಾನೆ ಮತ್ತು ವಕೀಲ ಸಮುದಾಯವನ್ನು ಹೆಚ್ಚು ಹೆಚ್ಚು ಅವಲಂಬಿಸುತ್ತಾನೆ ಎಂಬುವುದರಲ್ಲಿ ಯಾವ ಸಂದೇಹವೂ ಇಲ್ಲ.

## ಲಹರಿ

*ವಕೀಲ ದಿನಾಚರಣೆ ಸಂದರ್ಭದಲ್ಲಿ 'ಲಹರಿ ವಕೀಲರ ವೇದಿಕೆ' ಯಿಂದ ಡಿಸೆಂಬರ್ ೩ರ ಸಂಜೆ ಗಾಂಧಿನಗರದ ಕಾಮತ್ ಯಾತ್ರಿ ನಿವಾಸದಲ್ಲಿ ವಿಶೇಷ ಕಾರ್ಯಕ್ರಮ.*

*ಸಂಪರ್ಕಿಸಿ :*

ಎಸ್.ವಿ. ಶ್ರೀನಿವಾಸಮೂರ್ತಿ – ೯೮೪೫೫ ೭೬೩೨೧

## ಉಪ್ಪಿನಕಾಯಿ

ಭಾರತದಲ್ಲಿ ನ್ಯಾಯಾಧೀಶರನ್ನು ಆರಿಸುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯೆ ಇಲ್ಲ ಎಂದು ದೆಹಲಿ ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿ ಅಜಿತ್ ಪ್ರಕಾಶ್ ಶಾ ಹೇಳಿದ್ದಾರೆ.

ನ. ೧೩ರಂದು ಪಣಜಿಯಲ್ಲಿ ನಡೆದ 'ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ನ್ಯಾಯಾಂಗದ ಪಾತ್ರ' ಕುರಿತಾದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅವರು "ಈಗ ನ್ಯಾಯಾಧೀಶರನ್ನು ಪಾರದರ್ಶಕದಲ್ಲಿದ್ದ ಮಾನದಂಡಗಳನ್ನು ಅನುಸರಿಸಿ ಪಾರದರ್ಶಕವಲ್ಲದ ಸಂದರ್ಭಗಳಲ್ಲಿ ಆಯ್ಕೆ ಮಾಡಲಾಗುತ್ತಿದ್ದು ಇದು ಪ್ರಜಾಪ್ರಭುತ್ವದ ನೀತಿ–ನಿಯಮಗಳಿಗೆ ಅನುಗುಣವಾಗಿ ಇಲ್ಲ" ಎನ್ನುವುದನ್ನು ಎತ್ತಿ ತೋರಿಸಿದರು.

ಬೇರೆ ಬೇರೆ ಸಾಮಾಜಿಕ ಹಿನ್ನೆಲೆಯಿಂದ ಬಂದವರೆಲ್ಲರಿಗೂ ನ್ಯಾಯಾಂಗದಲ್ಲಿ ಸ್ಥಾನ ದೊರಕಬೇಕೆಂದು ಅವರು ಅಭಿಪ್ರಾಯಪಟ್ಟರು.

ಅಂಕಿ ಅಂಶಗಳನ್ನು ವಿಶ್ಲೇಷಿಸುತ್ತ ನ್ಯಾ॥ ಶಾ, "ಈಗ ಭಾರತದಲ್ಲಿ ಶೇಕಡಾ ೫ಕ್ಕಿಂತ ಕಡಿಮೆ ಸಂಖ್ಯೆಯ ಮಹಿಳಾ ನ್ಯಾಯಾಧೀಶರಿದ್ದಾರೆ" ಎಂದರು.

•●•

ಹೆಣ್ಣು ಮಕ್ಕಳು ಮದುವೆಯ ನಂತರ ತವರಿನ ಕುಟುಂಬವನ್ನು ಸಲಹುವ ಜವಾಬ್ದಾರಿಯಿಂದ ವಿಮುಖರಾಗುವುದಿಲ್ಲ ಎಂದಿರುವ ಬಾಂಬೆ ಉಚ್ಚ ನ್ಯಾಯಾಲಯ, ಇದೆ ಕಾರಣದಿಂದ ಮಹಾರಾಷ್ಟ್ರ ಸರಕಾರದ ಆಡಳಿತಾತ್ಮಕ ಆಜ್ಞೆಯೊಂದನ್ನು ರದ್ದುಗೊಳಿಸಿದೆ. ಆ ಆಜ್ಞೆಯಂತೆ ಸೇವೆಯಲ್ಲಿರುವ ತಂದೆ/ತಾಯಿಯ ಮರಣಾನಂತರ ಅನುಕಂಪ ಆಧಾರಿತ ನೌಕರಿಯನ್ನು ಮದುವೆಯಾಗದ ಹೆಣ್ಣು ಮಕ್ಕಳಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು.

•●•

ಭಾರತ, ಶ್ರೀಲಂಕಾದ ನ್ಯಾಯಾಧೀಶರನ್ನು ತರಬೇತುಗೊಳಿಸಲಿದೆ. ಕೊಲಂಬೊದಲ್ಲಿ ನ. ೧೨ ರಂದು ಶ್ರೀಲಂಕಾದ ನ್ಯಾಯ ಮಂತ್ರಿ ಅತಾಉಡಾ ಸೆನ್ವಿರತ್ನ ಮತ್ತು ಭಾರತದ ರಾಯಭಾರಿ ಅಶೋಕ ಕಾಂತಾ ಭೇಟಿಯಾದ ನಂತರ ಈ ಒಪ್ಪಂದಕ್ಕೆ ಬರಲಾಗಿದೆ.

ಬ್ರಿಟನ್ನಿನ ಆಳ್ವಿಕೆಯಲ್ಲಿ ಅಭಿವೃದ್ಧಿ ಹೊಂದಿದ ಭಾರತ ಮತ್ತು ಶ್ರೀಲಂಕಾದ ನ್ಯಾಯಾಂಗದ ಕಾರ್ಯ ನಿರ್ವಹಣೆಗೆ ಮೂಲವಾಗಿರುವ ನ್ಯಾಯಶಾಸ್ತ್ರ ಒಂದೆ.

•●•

ರಾಜೀವ್ ಗಾಂಧಿ ಹಂತಕಿ, ಸಧ್ಯ ಸೆರೆಮನೆ ವಾಸಿ, ನಳಿನಿ, ಅವಧಿ ಪೂರ್ವ ಬಿಡುಗಡೆಗಾಗಿ ಮೂರನೆ ಪ್ರಯತ್ನ ನಡೆಸಿದ್ದಾರೆ.

ವಿಶೇಷ ಟಾಡಾ ನ್ಯಾಯಾಲಯದಿಂದ ಮರಣ ದಂಡನೆಗೊಳಗಾಗಿದ್ದ ನಳಿನಿ, ಶಿಕ್ಷೆ ಜಾರಿಗೊಳ್ಳಬೇಕಾದ ಸಂದರ್ಭದಲ್ಲಿ ಗರ್ಭವತಿಯಾಗಿದ್ದರಿಂದ ದಂಡ ಪ್ರಕ್ರಿಯಾ ಸಂಹಿತೆಯ ಸೆ. ೪೧೬ ರಂತೆ ಮರಣ ದಂಡನೆಯಿಂದ ತಪ್ಪಿಸಿಕೊಂಡು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದರು.

೨೦೦೦ದಲ್ಲಿ ಸೆರೆಮನೆ ಸೇರಿದ ನಳಿನಿ, ತಾನು ಸುಧಾರಿಸಿದ್ದೇನೆ ಎಂಬ ವಾದವನ್ನು ಮುಂದಿಡುತ್ತಾ ಈಗಾಗಲೆ ಎರಡು ಬಾರಿ ಅವಧಿ ಪೂರ್ವ ಬಿಡುಗಡೆಗೆ ವಿಫಲ ಪ್ರಯತ್ನ ನಡೆಸಿದ್ದಾರೆ.

'ಅವಧಿ ಪೂರ್ವ ಬಿಡುಗಡೆ ಕೈದಿಯ ಹಕ್ಕಲ್ಲ. ಆದರೆ ಕೈದಿ ಮಾಡುವ ಮನವಿಯನ್ನು ಸರಕಾರ ಪರಿಶೀಲಿನೆ ಮಾಡಲೇ ಬೇಕು' ಎಂದಿದೆ ಸರ್ವೋಚ್ಚ ನ್ಯಾಯಾಲಯ, ನಳಿನಿಯ ಹಿಂದಿನ ಪ್ರಕರಣದಲ್ಲಿ.

ಪ್ರಕಾಶಕರು : ಎಸ್. ಎನ್. ಪ್ರಶಾಂತಚಂದ್ರ, ಲಹರಿ ವಕೀಲರ ವೇದಿಕೆ, ನಂ. ೨೯೮೦, 'ಲಕ್ಷ್ಮೀದೀಪ', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦ ೦೭೦
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೫೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩ ಸಂಪರ್ಕಿಸಿ : aravindneglur@gmail.com
KARBIL 01707 / 10 /1/2009-TC MAG/(2)/LR/PRB/70/10-11 ಸಂಪಾದಕರು : ಅರವಿಂದ ಎಂ. ನೆಗಳೂರ